
ಕಲ್ಯಾಣ ಕಿರಣ

ಮೇ–2010 ಬೆಲೆ–ರೂ.10




ಧಾರವಾಡದಲ್ಲಿ ದಿ.12–4–2010 ರಂದು ನಡೆದ ಮೆರವಣಿಗೆ





ದಿ.10-4-2010ರಂದು ಧಾರವಾಡ ಮುರುಘಾಮಠದ ಶ್ರೀ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳಿಂದ ಶರಣೋತ್ಸವ ಉದ್ಘಾಟನೆ



ದಿ.10-4-2010ರಂದು ಸಂಜೆ ನಡೆದ ಧರ್ಮ ಚಿಂತನಗೋಷ್ಠಿಯ ಉದ್ಘಾಟನೆಯನ್ನು ಲಿಂಗಾಯತ ಪಂಚಮಸಾಲೆ ಪೀಠಾಧೀಶರಾದ ಪೂಜ್ಯ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮಿಗಳು ನೆರವೇರಿಸಿದರು

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-40 ಬಸವ ಶಕೆ -876 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-5 ಮೇ-2010 ವಾರ್ಷಿಕ ಚಂದಾ 100/- ರೂ.

ಬಸವಾಷ್ಟಕ

ನತಜನ ರಕ್ಷಕ ಶ್ರೀಗುರು ಬಸವ
ಲಿಂಗಾಯತ ಸಂಸ್ಥಾಪಕ ಶ್ರೀ ಗುರು ಬಸವ
ಇಷ್ಟಪ್ರದಾಯಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥1॥

ವಚನ ಶಾಸ್ತ್ರ ಸಾರ್ವಭೌಮ ಶ್ರೀ ಗುರು ಬಸವ
ನವ ಪಥ ನಿರ್ಮಾಪಕ ಶ್ರೀಗುರು ಬಸವ
ಸಮತಾವಾದಿ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥2॥

ಇಷ್ಟಲಿಂಗದಾತ ಶ್ರೀ ಗುರು ಬಸವ
ಇಷ್ಟಲಿಂಗಧಾರಕ ಶ್ರೀ ಗುರು ಬಸವ
ಇಷ್ಟಲಿಂಗ ಪೂಜಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥3॥

ವಾಕ್ಸಿದ್ಧಿ ಪುರುಷ ಶ್ರೀ ಗುರು ಬಸವ
ಪಂಚ ಪರುಷ ಶ್ರೀ ಗುರು ಬಸವ
ಜೀವನ್ಮುಕ್ತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥4॥

ಪತಿತೋದ್ಧಾರಕ ಶ್ರೀ ಗುರು ಬಸವ
ದಲಿತೋದ್ಧಾರಕ ಶ್ರೀ ಗುರು ಬಸವ
ಪಾವನಚರಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥5॥

ಮಂತ್ರ ಪುರುಷ ಶ್ರೀ ಗುರು ಬಸವ
ಕ್ರಾಂತಿಯೋಗಿ ಶ್ರೀ ಗುರು ಬಸವ
ಶಾಂತಿದೂತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥6॥

ಶರಣ ಪ್ರೇಮಿ ಶ್ರೀ ಗುರು ಬಸವ
ಶರಣ ಪ್ರೀತ ಶ್ರೀ ಗುರು ಬಸವ
ಶರಣ ಪಥದಾತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥7॥

ಮುಕ್ತಿದಾಯಕ ಶ್ರೀ ಗುರು ಬಸವ
ಭಕ್ತೋದ್ಧಾರಕ ಶ್ರೀ ಗುರು ಬಸವ
ಬಸವಾತ್ಮಜೆ ಪಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥8॥

ರಚನೆ- ಮಾತಾಜಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮೇ 16ರಂದು 877ನೆಯ ಬಸವ ಜಯಂತಿ

ಧರ್ಮಪಿತ, ವಿಶ್ವಗುರು ಬಸವಣ್ಣನವರ ಜಯಂತಿಯು ದಿ. 16-5-10ರಂದು ಒದಗಿ ಬಂದಿದೆ. ಅಂದು ಸರ್ಕಾರಿ ರಜಾದಿನವೂ ಅಹುದು. ಆದ್ದರಿಂದ ಅಂದೇ ಮೆರವಣಿಗೆ, ಉತ್ಸವ ಆಚರಿಸಬೇಕು.

ಕೆಲವರು ರೋಹಿಣಿ ನಕ್ಷತ್ರದ ಆಧಾರದಲ್ಲಿ ಬಸವ ಜಯಂತಿಯನ್ನು ನಿರ್ಧರಿಸಿದರೆ ಮತ್ತೆ ಕೆಲವರು, ಅಕ್ಷಯ ತೃತೀಯಾದ ಮೇಲೆ ನಿರ್ಧರಿಸುವರು. ಇದರಿಂದ ಕ್ಯಾಲೆಂಡರ್‌ಗಳು ಕೊಡುವ ದಿನದಲ್ಲಿ ವ್ಯತ್ಯಾಸ ಬರುವುದು. ಆದ್ದರಿಂದ ಶರಣ ಬಂಧುಗಳು ಸರ್ಕಾರಿ ರಜಾ ದಿನ ಇರುವ ಕಾರಣ ಮೇ 16ರಂದು ಬಸವ ಜಯಂತಿಯನ್ನು ಆಚರಿಸಬೇಕು.

ಬೆಂಗಳೂರಿನ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬಸವ ಜಯಂತಿಯನ್ನು ದಿ. 16ರಂದು ಬೆಳಿಗ್ಗೆ 10-30ರಿಂದ ಆಚರಿಸಲಾಗುವುದು. ಕಾರ್ಯಕ್ರಮ ಮತ್ತು ಪ್ರಸಾದದ ನಂತರ ಮೆರವಣಿಗೆ - ಮಧ್ಯಾಹ್ನ 4 ರಿಂದ ಇರುತ್ತದೆ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123

ವೀರಶೈವ ಮಹಾಸಭೆ ಮತ್ತು ಶಿವಯೋಗ ಮಂದಿರ ಶತಮಾನೋತ್ಸವ ಆಚರಣೆಯ ಕೆಲವು ವಿಶಿಷ್ಟ ಸಂಗತಿಗಳು

ಇದೇ ದಿ. 9-4-2010ರಿಂದ 13-4-2010ರವರೆಗೆ ಬಾಗಲಕೋಟೆ ಜಲ್ಲೆಯ, ಬಾದಾಮಿ ತಾಲ್ಲೋಕಿನ ಶಿವಯೋಗ ಮಂದಿರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಶ್ರೀಮದ್ವೀರಶೈವ ಶಿವಯೋಗಮಂದಿರದ ಶತಮಾನೋತ್ಸವ ಕಾರ್ಯಕ್ರಮ ಕೋಟಿಗಟ್ಟಳೆ ವೆಚ್ಚದಲ್ಲಿ ಅದ್ದೂರಿಯಾಗಿ ಜರುಗಿತು. ಲಿಂಗಾಯತ ಸಮಾಜದ ಮುಖಂಡರು ಮತ್ತು ಎಲ್ಲ ಪಕ್ಷಗಳ ರಾಜಕಾರಣಿಗಳ ದಂಡೇ ಅಲ್ಲಿ ಬೀಡುಬಿಟ್ಟಿತ್ತು. ಆದರೆ ಸಭೆಗೆ ಕಳೆಯನ್ನು ನೀಡುವ ಜನರೇ ಇಲ್ಲವಾಗಿ ಸಮಾವೇಶವು ದೊಡ್ಡ ಸುದ್ದಿ ಮಾಡಿತು. ಈ ಸಮಾವೇಶದ ಕೆಲವು ಮುಖ್ಯ ವಿಷಯಗಳೆಂದರೆ:

1. ಜನರು ಭಾಗಿಯಾಗದೆ ಕುರ್ಚಿಗಳು ಖಾಲಿ ಇದ್ದು ಸಭೆಯು ಭಣಗುಟ್ಟಿದ್ದು.
2. ಗದುಗಿನ ತೋಂಟದಾರ್ಯ ಜಗದ್ಗುರು ಪೂಜ್ಯ ಶ್ರೀ ಡಾ|| ಸಿದ್ಧಲಿಂಗ ಸ್ವಾಮೀಜಿಯವರ ಮೇಲೆ ಹಲ್ಲೆ ನಡೆದುದು.
3. ತೇರನ್ನು ಜೆ.ಸಿ.ಬಿ.ಯಂತ್ರದಿಂದ ಎಳೆಸಿದುದು.

ಉದ್ಘಾಟನಾ ಸಭೆಗೆ ಮತ್ತು ಸೋನಿಯಾ ಗಾಂಧಿಯವರ (12-4-2010) ಸಭೆಗೆ ಜನರನ್ನು ಕಷ್ಟಪಟ್ಟು, ಅಪಾರ ಹಣ ವೆಚ್ಚ ಮಾಡಿ ಕರೆತಂದುದನ್ನು ಬಿಟ್ಟರೆ ಬಾಕಿ ಸಭೆಗಳಿಗೆ ಜನರೇ ಇಲ್ಲ. ಶ್ರೀ ಚನ್ನವೀರ ಕಣವಿಯವರು ಭಾಷಣ ಮಾಡುವ ಸಭೆಯಲ್ಲಿ ಎಣಿಸಿದರೆ 50 ಜನ ಇರಲಿಲ್ಲ. ಆದರ ಫೋಟೋ ಪ್ರಜಾವಾಣಿಯಲ್ಲಿ ಬಂದಿತ್ತು. ಶ್ರೀ.ಜಿ.ಎಸ್. ಸಿದ್ಧಲಿಂಗಯ್ಯನವರು ಎಲ್ಲೈ (ಖಾಲಿ) ಕುರ್ಚಿಗಳೇ, ಟೇಬಲ್‌ಗಳೇ ಎಂದು ಸಂಬೋಧನೆ ಮಾಡಿದುದಾಗಿ ತಿಳಿಯಿತು. ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯ 2ನೆಯ ಪುಟದಲ್ಲಿ ವೀರಶೈವ ಮಹಾಸಭೆ ಭವ್ಯವಾದ ಸುಸಜ್ಜಿತ ಕಟ್ಟಡವನ್ನು ಎಂಬತ್ತು ಸಾವಿರಕ್ಕಿಂತಲೂ ಅಧಿಕ ಸದಸ್ಯರನ್ನು ಹೊಂದಿರುವುದಾಗಿ ಬರೆಯಲಾಗಿದೆ. ಅಂದರೆ ಇವರೆಲ್ಲ ಹಣ ಕೊಟ್ಟು, ಮರೆತ ಸದಸ್ಯರೇ ವಿನಾ ವೀರಶೈವ ಮಹಾಸಭೆಯ ತತ್ವಾದರ್ಶಗಳಿಗೆ (?) ಬದ್ಧರಾದವರಲ್ಲ ಎಂದು ಸಾಬೀತಾಗುವುದಲ್ಲವೆ?

1904ರಲ್ಲಿ ಸ್ಥಾಪಿತವಾದ ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಶಿವಯೋಗ ಮಂದಿರ ಎರಡೂ ಸದುದ್ದೇಶದಿಂದ ಹುಟ್ಟಿದವಲ್ಲ. ಹಾನುಗಲ್ ಕುಮಾರ ಶ್ರೀಗಳ ಕುತಂತ್ರ ಬುದ್ಧಿಯ, ದು(ದೂ)ರಾಲೋಚನೆಯ ಪ್ರತಿಫಲವಾಗಿ ಹುಟ್ಟಿದ ಇವು ಸಮಾಜದ ಪ್ರಮುಖರಲ್ಲಿ ಭ್ರಾಂತಿಯನ್ನು ಹುಟ್ಟಿಸಿದವು. ಲಿಂ|| ತ್ಯಾಗವೀರ ಲಿಂಗರಾಜ ದೇಸಾಯಿಯವರನ್ನು ಮೊದಲುಗೊಂಡು ಈವರೆಗೆ 20 ಜನ ಅಧ್ಯಕ್ಷರು ಆಗಿ ಹೋಗಿದ್ದಾರೆ.

ಸಮಾಜದಲ್ಲಿ 750 ವರ್ಷಕಾಲ ಪ್ರಚಲಿತವಿದ್ದುದು ಕೇವಲ ಲಿಂಗಾಯತ ಎಂಬ ಪದ ಮಾತ್ರ. ವೀರಶೈವ ಬಳಸುವುದರಿಂದ ಇದಕ್ಕೆ ಪುರಾತನತೆ ಸಿಗುವುದು. ಇದು ಬಸವಪೂರ್ವದಿಂದಲೂ ಇರುವ ಧರ್ಮ ಎಂಬ ಭ್ರಾಂತಿಯನ್ನು ಸಮಾಜದ ಹಿರಿಯರಲ್ಲಿ ತುಂಬಲಾಯಿತು. ವೇದಾಗಮ ಶೃತಿ ಸ್ಮೃತಿಗಳಲ್ಲಿ ಉಕ್ತವಾದ ಧರ್ಮ ಎಂದು ಬಿಂಬಿಸಲಾಯಿತು. ಒಂದು ಸುಳ್ಳನ್ನು ಸಾವಿರ ಸಲ ಪುನಃ ಪುನಃ ಪುನಃ ಹೇಳಿದರೆ ಸ್ವತಃ ಸುಳ್ಳನ್ನು ಸೃಷ್ಟಿಸಿದವನೇ ನಂಬುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವೀರಶೈವ ಮಹಾಸಭೆಯ ವಿಷಯದಲ್ಲಿ ಮತ್ತು ಆದಿ ಪಂಚಾಚಾರ್ಯರ ಸೃಷ್ಟಿಯಲ್ಲೂ ಇದೇ

ನಡೆಯಿತು. ಒಂದು ಕಡೆ ವೀರಶೈವ ಮಹಾಸಭೆ ಮತ್ತು ಶಿವಯೋಗ ಮಂದಿರ, ಇನ್ನೊಂದು ಕಡೆ ಪಂಚಾಚಾರ್ಯರ ಕಲ್ಪನೆ ಲಿಂಗಾಯತ ಸಮಾಜವನ್ನು ಒಡೆಯ ತೊಡಗಿದವು. ಬಸವ ಭಕ್ತಿಯನ್ನು ದುರ್ಬಲಗೊಳಿಸತೊಡಗಿದವು. ಇದಕ್ಕೆ ಮುಖ್ಯ ಕಾರಣರು ವೀರಶೈವ ಮಹಾಸಭೆಯ ಸಂಸ್ಥಾಪಕರಾದ ಹಾನುಗಲ್ ಶ್ರೀಗಳು ಮತ್ತು ಪಂಚಾಚಾರ್ಯರಿಗೆ ಕಲ್ಪನೆಯ ಮೂಲಕ ಜನ್ಮವಿತ್ತ ಮೈಸೂರಿನ ಪಂಚಗ್ರಹ ಹಿರೇಮಠದ ಕಾಶೀನಾಥ ಶಾಸ್ತ್ರಿಗಳು.

ಅಖಂಡವಾಗಿದ್ದ ಲಿಂಗಾಯತ ಸಮಾಜದಲ್ಲಿ ಇವೆರಡು ಭಿನ್ನಮತೀಯ ಬಣಗಳು ಹುಟ್ಟಲು ಕಾರಣವಾದ ಕಥೆಯನ್ನು ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು ಹೀಗೆ ಹೇಳುತ್ತಿದ್ದರು. ಚಿತ್ರದುರ್ಗದ ಮುರುಘಾಮಠಕ್ಕೆ ಉತ್ತರಾಧಿಕಾರಿಯನ್ನು ಆರಿಸುವಾಗ ಮೂವರು ಸ್ಪರ್ಧಿಗಳು ಕಣದಲ್ಲಿದ್ದರು. ಒಬ್ಬರು ಜಯದೇವ ಶ್ರೀಗಳು, ಇನ್ನೊಬ್ಬರು ಹಾನಗಲ್ ಕುಮಾರ ಸ್ವಾಮಿಗಳು, ಮತ್ತೊಬ್ಬರು ರಂಭಾಪುರಿ ಮಠದ ಸ್ವಾಮಿಗಳು. ಅಂತಿಮವಾಗಿ ಜಯದೇವ ಶ್ರೀಗಳು ಜಗದ್ಗುರುವಾಗಿ ಆಯ್ಕೆಯಾದರು. ಆಗ ಇನ್ನಿಬ್ಬರು ಪ್ರತಿಸ್ಪರ್ಧಿಗಳಾಗಿ ಸಿಡಿದು ಹೋದರು. ಮುರುಘಾ ಸಮಯ(ಬಣ)ಕ್ಕೆ ಪ್ರತಿಯಾಗಿ ಕುಮಾರ ಸಮಯವನ್ನು ಹುಟ್ಟು ಹಾಕುವ ಕೆಲಸವನ್ನು ಮಾಡಿದ್ದಲ್ಲದೆ ಶರಣ ಪರಂಪರೆಯನ್ನು ದುರ್ಬಲಗೊಳಿಸಲು ವೀರಶೈವ ಮಹಾಸಭೆಯನ್ನು ಸ್ಥಾಪಿಸಿದರು. ಅದಕ್ಕೂ ಮೊದಲು ಲಿಂಗಾಯತ, ಲಿಂಗವಂತ ಪದ ಬಿಟ್ಟರೆ ಜನರು ಬೇರೊಂದು ಪದವನ್ನು ಅರಿಯದಾಗಿದ್ದರು. ಬ್ರಿಟಿಷ್ ಗೆಜೆಟ್‌ಗಳಲ್ಲಿ ಲಿಂಗಾಯತ ಮತಕ್ಕೆ ಕಲ್ಯಾಣದ ಬಸವಣ್ಣನವರೇ ಸ್ಥಾಪಕರು ಎಂದು ದಾಖಲಾಗಿದೆ. 18ನೆಯ ಶತಮಾನದಲ್ಲಿ ರಚಿತವಾದ ಪರ್ವತೇಶ ಕವಿಯ ಚತುರಾಚಾರ್ಯ ಪುರಾಣದಲ್ಲಿ ಬರುವ ನಾಲ್ವರು ಆಚಾರ್ಯರು ಮಾತ್ರ ಐತಿಹಾಸಿಕ ವ್ಯಕ್ತಿಗಳು; ಅವರೆಂದರ ರೇವಣಸಿದ್ಧ, ಮರುಳಸಿದ್ಧ ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ಏಕೋರಾಮ.

ಹೀಗೆ ಇಬ್ಬರು ಮಹನೀಯರು ಲಿಂಗಾಯತ ಧರ್ಮದ ಪ್ರಗತಿಪರ ಸ್ವರೂಪವನ್ನು ಹಾಳು ಮಾಡಿದರು. ಆಂಧ್ರ ಮೂಲದಿಂದ ಬಂದ ವೈದಿಕ ಸಂಪ್ರದಾಯದ ವೀರಶೈವದ ಅಂಟುಪಟ್ಟಿಯನ್ನು ಲಿಂಗಾಯತರಿಗೆ ಅಂಟಿಸಿದ್ದಲ್ಲದೆ ಆಚರಣೆಗಳನ್ನು ಕೆಡಿಸಿದರು.

ಇನ್ನು ಶಿವಯೋಗ ಮಂದಿರ, ಒಂದು ಕೆಟ್ಟ ಸಂಪ್ರದಾಯಕ್ಕೆ ಅದು ನಾಂದಿ ಹಾಡಿತು. ಜಂಗಮವನ್ನು ಜಾತಿಯಾಗಿ ವಿಕೃತಗೊಳಿಸಿ, ಲಿಂಗಾಯತರಿಗೆ ಕಡ್ಡಾಯವಾಗಿ ಮಾಡಬೇಕಾದ ಇಷ್ಟಲಿಂಗದೀಕ್ಷೆಯನ್ನು ಮರೆಸಿ, ಜಂಗಮ ವಟುಗಳಿಗೆ ಅಯ್ಯಾಚಾರ ಮಾಡುವ (ಉಪನಯನದ ಅನುಕರಣೆ) ಆಚರಣೆ ಬಳಕೆಗೆ ತಂದಿತು. ಶಿವಯೋಗ ಮಂದಿರದ ಪ್ರವೇಶವನ್ನು ಹುಟ್ಟು ಜಂಗಮರಿಗೆ ಮೀಸಲಿಟ್ಟು ಬೃಹತ್ ಭಕ್ತವರ್ಗದವರಿಗೆ ಮನು ಧರ್ಮ ಶೂದ್ರರಿಗೆ ದ್ವಿಜ ಸಂಸ್ಕಾರ ನಿರಾಕರಿಸಿದಂತೆ ಮಠ-ಪೀಠಾಧಿಪತ್ಯ ವಂಚಿತರನ್ನಾಗಿ ಮಾಡಿತು. ಉತ್ತರ ಕರ್ನಾಟಕದಲ್ಲಿ ಪ್ರಬಲವಾಗಿ ಈ ನಂಬಿಕೆ ಬೆಳೆಯಿತು. ಈ ಜಾತಿವಾದದ ಬೆಂಕಿಯ ಝಳದಲ್ಲಿ ನಲುಗಿ ಹೋದವರ ದೊಡ್ಡಪಟ್ಟಿಯೇ ಇದೆ. ಅನೇಕ ಲಿಂಗಾಯತ ಮುಮುಕ್ಷುಗಳು ಸಂಪ್ರದಾಯದ ಹೊಡೆತ ತಾಳಲಾರದೆ ಲಿಂಗಾಯತೇತರ ಮಾರ್ಗಗಳಲ್ಲಿ ಕರಗಿ ಹೋದರು. ಶಿವಯೋಗ ಮಂದಿರದ ಸಂಸ್ಥಾಪನೆಯ ಕಾಲಕ್ಕೆ 3 ಮಠಗಳಲ್ಲಿ ಭಕ್ತ ವರ್ಗದ ವಟುಗಳಿದ್ದರಂತೆ. 1. ಭಾಲ್ಕಿಯ ಹಿರೇಮಠ 2. ಸಿಂದಗಿಯ ಸಾರಂಗ ಮಠ 3. ನವಲುಗುಂದದ ಗವಿಮಠ. ಆಗ ಸಮಾಜದ ಪ್ರಮುಖರು ಒತ್ತಾಯಿಸಿದಾಗ ಈ ಮೂವರಿಗೆ ಮಾತ್ರ ಶಿವಯೋಗ ಮಂದಿರದಲ್ಲಿ ಪ್ರವೇಶ ಕೊಡುವುದಾಗಿ ಒಪ್ಪಿದರಂತೆ. ನಂತರ ಭಕ್ತವರ್ಗದ ಯಾರಿಗೂ ಪ್ರವೇಶ ಕೊಡಲಿಲ್ಲವಂತೆ. ಆಚಾರ, ಅರಿವು, ಅನುಭಾವಗಳ ಮೇಲೆ ಭಕ್ತ, ಗುರು, ಜಂಗಮವಾಗುವ ಶರಣ ಪರಂಪರೆಯನ್ನು ಶಿವಯೋಗ ಮಂದಿರ ಕತ್ತರಿಸಿ ಹಾಕಿತು. ಬಹುಶಃ ಇದರ ಫಲಶ್ರುತಿಯೇ ಇರಬಹುದು, ಜನರು ಶಿವಯೋಗ ಮಂದಿರದ ಶತಮಾನೋತ್ಸವ ತಮಗೆ ಸಂಬಂಧವಿಲ್ಲ ಎಂದು

ಅದರಲ್ಲಿ ನಿರಾಸಕ್ತಿ ತೋರಿಸಿರಬೇಕು. ಗಿಡಕ್ಕೆ ಎರಡು ಭಾಗಗಳುಂಟು. 1. ಬೇರು 2. ಗಿಡ. ಬೇರನ್ನು ಕತ್ತರಿಸಿಕೊಂಡು ಗಿಡದ ಮೇಲ್ಭಾಗ ಬದುಕಬಹುದೆ? ಭಕ್ತವರ್ಗ ಬೇರಿನಂತೆ, ಅದರ ಮೂಲಕ ಸಾರ ಹೀರಿಕೊಂಡು ಜಂಗಮ ಎಂಬ ವೃಕ್ಷ ಬೆಳೆಯುತ್ತದೆ. ಭಕ್ತವರ್ಗ ಎಂಬ ಬೇರನ್ನೇ ಕತ್ತರಿಸಿಕೊಳ್ಳುವ ಪ್ರಯತ್ನವನ್ನು ಶಿವಯೋಗ ಮಂದಿರ ಮಾಡಿದ್ದು ಎಷ್ಟು ಸಮಂಜಸ?

2. ಗದಗಿನ ಜಗದ್ಗುರುಗಳ ಮೇಲೆ ಹಲ್ಲೆ

ಪೂಜ್ಯ ಶ್ರೀ ತೋಂಟದಾರ್ಯ ಜಗದ್ಗುರು ಡಾ|| ಸಿದ್ಧಲಿಂಗ ಸ್ವಾಮಿಗಳು ತಮ್ಮ ಭಾಷಣದಲ್ಲಿ ಕೆಲವು ವಿಷಯ ಪ್ರಸ್ತಾಪಿಸಿದ್ದಾರೆ. ಜಂಗಮವನ್ನು ಜಾತಿಯಾಗಿ ಮಾಡಿ ಭಕ್ತ ವರ್ಗದವರಿಗೆ ಅವಕಾಶ ನಿರಾಕರಣೆ ಎಷ್ಟರ ಮಟ್ಟಿಗೆ ಸರಿ? ಎಂಬುದು ಒಂದು ವಿಷಯ.

"ಶಿವಯೋಗ ಮಂದಿರವು ಈವರೆಗೂ ನೂರು ವರ್ಷಗಳ ಅವಧಿಯಲ್ಲಿ ಐದು ಸಾವಿರ ಮಠಾಧೀಶರನ್ನು ತಯಾರು ಮಾಡಿರಬಹುದು. ಒಬ್ಬೊಬ್ಬರು ಐವತ್ತು ಜನರನ್ನು ಕರೆತಂದಿದ್ದರೂ ಈ ಪೆಂಡಾಲ್ ತುಂಬುತ್ತಿತ್ತು, ಯಾಕೆ ಬಂದಿಲ್ಲ ಎಂದು ಪರಾಮರ್ಶೆ ಮಾಡಿಕೊಳ್ಳಬೇಕು. ಒಬ್ಬ ಲಿಂಗಾನಂದ ಸ್ವಾಮೀಜಿ, ಒಬ್ಬ ಮಾತೆ ಮಹಾದೇವಿಯವರು ಆಸ್ತಿಪಾಸ್ತಿಯಿಲ್ಲದೆ ಬರಿಗೈನಿಂದ ಕರ್ನಾಟಕ ಮಾತ್ರವಲ್ಲ ಹೊರರಾಜ್ಯಗಳಲ್ಲೂ ಧರ್ಮ ಪ್ರಚಾರ ಮಾಡಿದ್ದಾರೆ. ಉಳಿದ ಮಠಾಧಿಪತಿಗಳಿಗೇಕೆ ಸಾಧ್ಯವಾಗಿಲ್ಲ?"

ಹೀಗೆ ಸತ್ಯ ನಿಷ್ಠ ವಸ್ತುನಿಷ್ಠವಾಗಿ ಪೂಜ್ಯ ಜಗದ್ಗುರುಗಳು ಮಾತನಾಡಿದ್ದು ಶಿವಯೋಗ ಮಂದಿರದ ಅಧ್ಯಕ್ಷರಾದ ಶ್ರೀ ಅನ್ನದಾನ ಸ್ವಾಮಿಗಳನ್ನು, ಬಾಗಲಕೋಟೆ ಶಾಸಕ ವೀರಣ್ಣ ಚರಂತಿಮಠ ಅವರನ್ನು ಕೆರಳಿಸಿತಂತೆ. ಅವರು ಪ್ರಚೋದಿಸಿದರೋ ಅಥವಾ ಮುಖ್ಯಸ್ಥರ ಕೋಪದಿಂದ ಜನರೇ ಪ್ರಚೋದಿತರಾದರೋ ಕೆಲವು ಗೂಂಡಾಜನರು ತೋಂಟದಾರ್ಯ ಜಗದ್ಗುರುಗಳ ಮೇಲೆ ದೈಹಿಕವಾಗಿ ಹಲ್ಲೆ ಮಾಡಿದ್ದಲ್ಲದೆ ಕಾರನ್ನು ಜಖಂಗೊಳಿಸಿದ್ದಾರೆ.

ಈ ಅವಾಂತರ ಅನಗತ್ಯ. ಪೂಜ್ಯ ಜಗದ್ಗುರುಗಳ ಧೈರ್ಯವನ್ನು, ಅವರ ಮಾತಿನಲ್ಲಿ ಇರುವ ಸತ್ಯತೆಯನ್ನು ಅರಿತಿದ್ದರೆ ಶತಮಾನೋತ್ಸವ ಸಾರ್ಥಕವಾಗುತ್ತಿತ್ತು. ನಮ್ಮದು ಅನುಭವ ಮಂಟಪದ ಸಂಸ್ಕೃತಿ. ಮುಕ್ತ ಚರ್ಚೆಗೆ ಅವಕಾಶವಿರಬೇಕು. ಇದು ಆತ್ಮಾವಲೋಕನ ಮಾಡುವ ಸಭೆಯಾಗಬೇಕಿತ್ತು. ಪೂಜ್ಯ ಶ್ರೀಗಳ ಪ್ರಗತಿಪರ ವಿಚಾರಧಾರೆ ಮತ್ತು ಸಲಹೆಗಾಗಿ ಅವರನ್ನು ಅಭಿನಂದಿಸಿ, ಸಲಹೆಯನ್ನು ಪರಿಶೀಲಿಸುವುದಾಗಿ ಶಿವಯೋಗ ಮಂದಿರದ ಅಧ್ಯಕ್ಷರು ಹೇಳಬೇಕಾಗಿತ್ತು. ಹಾಗೆ ಮಾಡದೆ ಒಂದು ಧಾರ್ಮಿಕ ಸಮಾವೇಶದಲ್ಲಿ ಪೂಜ್ಯರ ಮೇಲೆ ಹಲ್ಲೆ ಮಾಡಿಸುವುದು ಯಾವ ಸನ್ನಡತೆ? ಇದರಿಂದ ಇಡೀ ಸಮಾಜಕ್ಕೆ ಕಳಂಕ ಉಂಟಾಯಿತು. ವೀರಶೈವ ಮಹಾಸಭೆ ಮತ್ತು ಶಿವಯೋಗ ಮಂದಿರದ ಶತಮಾನೋತ್ಸವ ಅಂಗೈ ತೋರಿಸಿ ಅವಲಕ್ಷಣ ಎನಿಸಿಕೊಂಡಂತೆ ಮಾಡಿದುದು ಖಂಡನಾರ್ಹ. ಪೂಜ್ಯ ಶ್ರೀಗಳ ದಿಟ್ಟ ಪ್ರತಿಪಾದನೆ ಅಭಿನಂದನಾರ್ಹ.

ಬಸವ ಯೋಗ ಮಂದಿರದ ಆವಶ್ಯಕತೆ

ಧಾರವಾಡದಲ್ಲಿ ನಡೆದ ಶರಣೋತ್ಸವಕ್ಕೆ ಲಿಂಗಾಯತ ಪಂಚಮಸಾಲೆ ಪೀಠದ ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮಿಗಳು ದಿ. 10-4-2010ರಂದು ಭಾಗವಹಿಸಿದ್ದಾಗಲೇ ಗದುಗಿನ ಜಗದ್ಗುರುಗಳ ಮೇಲೆ ನಡೆದ ಹಲ್ಲೆಯ ಸುದ್ದಿ ಪೂಜ್ಯರ ಜಂಗಮ ದೂರವಾಣಿಯ ಮೂಲಕ ತಿಳಿಯಿತು. ನಾವು ತಕ್ಷಣವೇ ಖಂಡನೆಯನ್ನು ಮಾಡಿದೆವು. ಮರು ದಿವಸ 11-4-2010 ರಂದು ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿ ನಡೆದ ಸಭೆಯಲ್ಲಿ ಖಂಡನಾ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ದಿ. 13-4-2010ರಂದು ಗದಗಿಗೆ ಹೋಗಿ ಪೂಜ್ಯ ಜಗದ್ಗುರುಗಳನ್ನು ಕಂಡು "ಬಸವಾಭಿಮಾನಿಗಳೆಲ್ಲರೂ ತಮ್ಮ ಹಿಂದೆ ಇದ್ದಾರೆ. ನೀವು ದಿಟ್ಟತನದಿಂದ ಸಂಪ್ರದಾಯವಾದಿಗಳ ಎದುರಿನಲ್ಲಿ ಸತ್ಯವನ್ನು ಪ್ರತಿಪಾದಿಸಿದ್ದೀರಿ. ಇದು ಅಭಿನಂದನಾರ್ಹ. ಪರಿವರ್ತನೆಯ ಈ ಕಾಲದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಲು ಪ್ರೇರಣೆ ನೀಡಿದ್ದೀರೆಂದು ನಿಮ್ಮನ್ನು ಅಭಿನಂದಿಸಿ, ಪರಿಶೀಲಿಸುತ್ತೇವೆ ಎನ್ನುವ ಬದಲು ದೈಹಿಕವಾಗಿ ಹಲ್ಲೆ ಮಾಡಿಸಿದ್ದಲ್ಲದೆ ಕಾರಿಗೂ ಜಖಂ ಮಾಡಿದ್ದು ಖಂಡನಾರ್ಹ. ನಮ್ಮದು ಅನುಭವ ಮಂಟಪದ ಸಂಸ್ಕೃತಿ. ಇಲ್ಲಿ ಮುಕ್ತ ಚರ್ಚೆಗೆ ಅವಕಾಶವಿದೆ. ಅದನ್ನು ಮಾಡುವುದು ಬಿಟ್ಟು ಸತ್ಯವನ್ನು ಪ್ರತಿಪಾದಿಸಿದಕ್ಕೆ ದೈಹಿಕವಾಗಿ ಹಲ್ಲೆ ಮಾಡಿದ್ದು ಅನಾಗರಿಕ ಮತ್ತು ಖಂಡನೀಯ." ಎಂದು ಸ್ಪಷ್ಟವಾಗಿ ತಿಳಿಸಿದೆವು.

ಇದೇ ಸಂದರ್ಭದಲ್ಲಿ ನಾನು ಒಂದು ಅಮೂಲ್ಯ ಸಲಹೆಯನ್ನು ಮುಂದಿಟ್ಟೆ. "ತಾವು ಶಿವಯೋಗ ಮಂದಿರದವರು ಎಲ್ಲ ಒಳಜಾತಿಯ ಲಿಂಗಾಯತ ವಟುಗಳಿಗೆ ಪ್ರವೇಶ ನೀಡಲು ಆಗ್ರಹಿಸಿದ್ದೀರಿ. ಶಿವಯೋಗ ಮಂದಿರದವರಿಗೆ ಗೊತ್ತಿಲ್ಲವೆಂತಲ್ಲ. ಗೊತ್ತಿದ್ದೂ ಜಾತಿವಾದವನ್ನು ಎತ್ತಿ ಹಿಡಿಯುತ್ತಿದ್ದಾರೆ. ಅವರನ್ನು ಪರಿವರ್ತಿಸುವುದು ಕಷ್ಟಸಾಧ್ಯ. ಎರಡನೆಯದಾಗಿ ಅವರು ತಿದ್ದುಪಡಿ ಮಾಡಿದರೂ ಅದರಿಂದ ಏನೂ ಪ್ರಯೋಜನವಾಗದು. ಏಕೆಂದರೆ ಶಿವಯೋಗ ಮಂದಿರದಲ್ಲಿ ಕಲಿಸುವುದು ವೈದಿಕ ವಿಧಿ ವಿಧಾನಗಳನ್ನು; ಅವುಗಳು ಈಗ ಅಗತ್ಯವಿಲ್ಲ. ಆದ್ದರಿಂದ ವಚನ ಸಾಹಿತ್ಯದ ಆಧಾರದ ಮೇಲೆ ತತ್ವಗಳನ್ನು ಪ್ರತಿಪಾದನೆ ಮಾಡುವವರ ಮತ್ತು ಧಾರ್ಮಿಕ ವಿಧಿವಿಧಾನ ಮಾಡಬಲ್ಲವರ ಅಗತ್ಯ ಬಹಳವಿದೆ. ಶಿವಯೋಗ ಮಂದಿರಕ್ಕೆ ಪರ್ಯಾಯವಾಗಿ ಬಸವ ಯೋಗ ಮಂದಿರ ರೂಪಗೊಂಡು ವಚನ ಸಾಹಿತ್ಯದ ಅಧ್ಯಯನ, ತರಬೇತಿ ಅಲ್ಲಿ ಸಿಗುವಂತಾಗಬೇಕು. ಲಿಂಗಾಯತರ ಒಳಪಂಗಡಗಳವರಿಗಲ್ಲದೆ ಲಿಂಗಧಾರಿಗಳಾಗಿ ಬರುವ ಆಸಕ್ತ ಮುಮುಕ್ಷುಗಳಿಗೆ ಸಹ ಬಸವ ಯೋಗಮಂದಿರದಲ್ಲಿ ಪ್ರವೇಶ ಮತ್ತು ತರಬೇತಿ ಸಿಗಬೇಕು." ಎಂದು ಹೇಳಿದಾಗ, ಬಹಳ ಒಳ್ಳೆಯ ಸಲಹೆ ಎಂದು ತೋಂಟದಾರ್ಯ ಜಗದ್ಗುರುಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಅಶ್ವಾರೂಢ ಬಸವಣ್ಣನವರ ಪುತ್ಥಳಿಯೊಂದನ್ನು ನಮಗೆ ನೆನಪಿನ ಕಾಣಿಕೆಯಾಗಿ ನೀಡಿ, ಗದುಗಿನ ಜಗದ್ಗುರುಗಳು ಶಾಲು ಹೊದ್ದಿಸಿ, ಮಾಲಾರ್ಪಣೆ ಮಾಡಿ ಗೌರವಿಸಿದರು. ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಗಂಗಾದೇವಿಯವರಿಗೂ ಶಾಲು ಹೊದ್ದಿಸಿ, ಸತ್ಕರಿಸಿದರು. ನಮ್ಮ ಅಂದಿನ ಭೇಟಿ ಸೌಹಾರ್ದಯುತವಾಗಿತ್ತು.

ಜೂನ್ 30ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 16ನೆಯ ಲಿಂಗೈಕ್ಯ ಸಂಸ್ಮರಣೆ

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಹಿರಿಯೂರಿನಲ್ಲಿ ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ದಿ.30-6-2010ಕ್ಕೆ 16 ವರ್ಷಗಳಾಗುತ್ತಿರುವುದರಿಂದ ಬೆಂಗಳೂರಿನ ಬಸವ ಮಂಟಪದಲ್ಲಿ ಅಂದು ಬೆಳಿಗ್ಗೆ 11ಗಂಟೆಯಿಂದ ಸಂಸ್ಮರಣಾ ಕಾರ್ಯಕ್ರಮ ಮತ್ತು ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ.

ಸರ್ವರಿಗೂ ಆದರದ ಸ್ವಾಗತ

ಪ್ರಜಾವಾಣಿ 23-4-10

- ಬಿ.ಎಸ್.ಷಣ್ಮುಖಪ್ಪ

ಪಂಚ ಪೀಠಗಳ ಪ್ರತಿಪಾದನೆ ನಿಜವೆಷ್ಟು?

ಲಿಂಗಾಯತ ಧರ್ಮವನ್ನು ಇತಿಹಾಸದುದ್ದಕ್ಕೂ ಹೈಜಾಕ್ ಮಾಡುತ್ತಲೇ ಬಂದಿರುವ ವೀರಶೈವ ಪಂಚಪೀಠಾಧಿಪತಿಗಳು ಮೂಲತಃ ಚತುರಾಚಾರ್ಯರು ಎಂಬುದಕ್ಕೆ 1698ರಲ್ಲಿ ರಚಿತವಾದ ಸಂಪಾದನೆಯ ಪರ್ವತೇಶನ ಚತುರಾಚಾರ್ಯರ ಚರಿತ್ರೆ ಒಂದು ಉತ್ತಮ ಆಕರ ಸಾಕ್ಷಿ.

ರಂಭಾಪುರಿಯ ರೇಣುಕ, ಉಜ್ಜಯಿನಿಯ ಮರುಳ ಸಿದ್ಧ, ಕೇದಾರದ ಭೀಮಾಶಂಕರ ಲಿಂಗ, ಶ್ರೀಶೈಲದ ಪಂಡಿತಾರಾಧ್ಯರೇ ಈ ಚತುರಾಚಾರ್ಯರು. ಇವರು 16ನೇ ಶತಮಾನದ ನಂತರ ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿಕೊಳ್ಳುವ ನೆಪದಲ್ಲಿ ಐದನೆಯ ಪೀಠವನ್ನಾಗಿ ಕಾಶಿಯ ಪೀಠವನ್ನು ಸೃಷ್ಟಿಸಿಕೊಂಡರು. ಇದಕ್ಕೆ ಜ್ಞಾನ ಸಿಂಹಾಸನಾ ಪೀಠ ಎಂದು ಹೆಸರಿಟ್ಟುಕೊಂಡರು. ಅದಕ್ಕಾಗಿ ಕಾಶಿಯ ಜಂಗಮವಾಡಿಯಲ್ಲಿ ಶಾಖೆಯೊಂದನ್ನು ತೆರೆದು ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿದರು.

ಇವರು ಕಾಶಿಯನ್ನೇ ಪೀಠವನ್ನಾಗಿಸಿಕೊಂಡಿದ್ದಕ್ಕೆ ಒಂದು ಪ್ರಬಲ ಕಾರಣವೂ ಇದೆ. ಕಾಶಿ ಎಂಬುದು ಭಾರತದ ಧಾರ್ಮಿಕ ಭೂಪಟದಲ್ಲಿ ಬಹಳಷ್ಟು ನಂಬಿಕೆಯ ಮತ್ತು ಪುಣ್ಯದ ಪರಿಕಲ್ಪನೆ ಹೊಂದಿದ ಪ್ರದೇಶ. ಇಂತಹ ಕಾಶಿಯಲ್ಲಿ 17ನೇ ಶತಮಾನದಲ್ಲಿ ಸ್ಥಳೀಯ ಗೋಸಾವಿ ಮಠಕ್ಕೆ ಒಬ್ಬ ಮಲ್ಲಿಕಾರ್ಜುನ ಗೋಸಾವಿ ಎಂಬ ಲಿಂಗಾಯತ ನೇಮಕವಾಗಿದ್ದ. ನಾಥ ಸಂಪ್ರದಾಯ ಎಂದರೆ ಇಲ್ಲಿ ಯಾರು ಬೇಕಾದರೂ ಮಠಾಧಿಪತಿಗಳಾಗಬಹುದು. ನಮ್ಮ ಹುಬ್ಬಳ್ಳಿ ಸಿದ್ಧಾರೂಢ ಮಠದಂತೆ. ಹೀಗಾಗಿ ಇಂತಹ ಮಠಕ್ಕೆ ಯಾವಾಗ ಲಿಂಗಾಯತನೊಬ್ಬ ಪೀಠಾಧಿಪತಿಯಾಗಿ ಕುಳಿತು ಸತ್ತುಹೋದನೋ ಆ ಬಳಿಕ ಈ ಚತುರಾಚಾರ್ಯರ ಕಣ್ಣು ಇದರ ಮೇಲೆ ಬಿದ್ದಿತು. ಕಾಗಕ್ಕ - ಗುಬ್ಬಕ್ಕನ ಕಥೆಗಳನ್ನು ಸೃಷ್ಟಿಸಿ ಇದು ಕೂಡಾ ತಮ್ಮದೇ ಮಠ ಎಂದು ಅನುಯಯಿಗಳನ್ನು ನಂಬಿಸಿ ತಮ್ಮದು ಪಂಚಪೀಠದ ಪರಂಪರೆ ಎಂದು ಬಿಂಬಿಸಿಕೊಂಡರು.

ಮೂಲತಃ ಆಂಧ್ರಪ್ರದೇಶದ ಆರಾಧ್ಯರಾದ ಈ ಚತುರಾಚಾರ್ಯರು ವಾಸ್ತವದಲ್ಲಿ ಶೈವ ಪಂಥದ ಆರಾಧಕರು. 12ನೇ ಶತಮಾನದಲ್ಲಿ ಇವರು ವೀರ ವ್ರತಗಳನ್ನು ಹಿಡಿಯುತ್ತಿದ್ದರು. ಅಂದರೆ ವೀರಭದ್ರನ ಆರಾಧನೆಯಲ್ಲಿ ವ್ರತಾಚರಣೆ ನಡೆಸುವುದು ಇದರ ಪರಿಪಾಠವಾಗಿತ್ತು. ಹೀಗೆ ವ್ರತ ಹಿಡಿದ ಪುರವಂತರು ವೀರಗಾಸೆ ಹಾಕಿ ವೀರಭದ್ರನ ವರ್ಣನೆ ಮಾಡುತ್ತಾ ಕುಣಿಯುತ್ತಿದ್ದರೆ ಇವರ ಆರ್ಭಟ ನೋಡುಗರಿಗೆ ಅತ್ಯಂತ ಆಕರ್ಷಕವಾಗಿರುತ್ತಿದ್ದವು. ಈ ವೇಶಕ್ಕೆ ಲಿಂಗಾಯತರು ಮಾರು ಹೋದರು. ಒಡಲೊಳಗೆ ಪುರೋಹಿತಶಾಹಿ ವ್ಯವಸ್ಥೆಯನ್ನು ಪೋಷಿಸುವ ಮತ್ತು ಬಸವಣ್ಣನ ಮೇಲೆ ಕೆಂಡ ಕಾರುತ್ತಿದ್ದ ಶೈವಾರಾಧಕರು ನಿಧಾನವಾಗಿ ಇಂತಹ ವೀರವ್ರತ ಹಿಡಿಯುವವರೆಲ್ಲಾ ವೀರಶೈವರೆಂದು ಕರೆದುಕೊಳ್ಳಲಾರಂಭಿಸಿದರು. ಮೆತ್ತಗೇ ಸಂಪ್ರದಾಯ, ಆಚರಣೆಗಳ ನೆಪದಲ್ಲಿ ಲಿಂಗಾಯತರಿಗೆ ತಾವೇ ಗುರುಗಳೆಂದು ಬಿಂಬಿಸಿಕೊಂಡು ಅವರ ಮೇಲೆ ಸವಾರಿ ಶುರು ಮಾಡಿದರು. ಹಾಗೆ ನೋಡಿದರೆ ಲಿಂಗಾಯತ ಗುರು ಪರಂಪರೆ ಹೊಂದಿದ ಮಠಗಳೆಂದರೆ ಚಿತ್ರದುರ್ಗದ ಮುರುಘಾಮಠ, ಹುಬ್ಬಳ್ಳಿಯ ಮೂರು ಸಾವಿರ ಮಠ ಹಾಗೂ ಗದುಗಿನ ತೋಂಟದಾರ್ಯ ಮಠಗಳೇ ಮುಖ್ಯವಾದವು. ಇವು ಬಸವ ಧರ್ಮದ ಗುರು - ವಿರಕ್ತ ಪರಂಪರೆಯ ತಾಣಗಳು.

15ನೇ ಶತಮಾನವನ್ನು ಲಿಂಗಾಯತರ ಪುನರುಜ್ಜೀವನ ಕಾಲ ಎಂದೇ ಕರೆಯಲಾಗುತ್ತದೆ. ಯಾಕೆಂದರೆ ಚತುರಾಚಾರ್ಯರು ಅತ್ಯಂತ ಪ್ರವರ್ಧಮಾನಕ್ಕೆ ಬರುವ ಮೂಲಕ ತಮ್ಮನ್ನು ತಾವೇ ಜಗದ್ಗುರು ಎಂದು ಕರೆದುಕೊಂಡ ಗಳಿಗೆಯಿದು. (ನಿಜವಾಗಿಯೂ ಇವರ್‍ಯಾರು ಜಗದ್ಗುರುಗಳಾಗಿರಲೇ ಇಲ್ಲ. ಜಗದಾಚಾರ್ಯರು ಎಂದೇ ಇವರನ್ನು ಸಂಬೋಧಿಸುವುದು ಸೂಕ್ತ) ಕುರುಬರ ಸಮುದಾಯದ ರೇವಣನನ್ನು ಆಪೋಶನಗೈದದ್ದು 12ನೇ ಶತಮಾನದ ಏಕಾಂತ ರಾಮಯ್ಯ ಎಂಬ ನಿಮ್ನ ವರ್ಗದ ಶರಣ ಏಕೋರಾಮಾರಾಧ್ಯ ಆಗಿದ್ದು ಇದೇ ಸಂದರ್ಭದಲ್ಲಿ. ನಿಜವಾಗಿಯೂ ಲಿಂಗವಂತರು ವೀರಶೈವೀಕರಣಗೊಳ್ಳುತ್ತಿದ್ದ ಸಂಕಟದ ಕಾಲವಿದು. ಈ ಸಮಯದಲ್ಲಿ ಲಿಂಗಾಯತ ಧರ್ಮವನ್ನು ಉಳಿಸಿಕೊಳ್ಳಲು ಸಾಕಷ್ಟು ಹೋರಾಟಗಳು ನಡೆದವು. ಯಾವಾಗ ಜಗದಾಚಾರ್ಯರು ಪಂಚಪೀಠಾಧೀಶ್ವರರಾದರೋ ಆಗ ಅವರಿಗೊಂದು ಧರ್ಮ ಗ್ರಂಥಬೇಕಿತ್ತು. ಅದಕ್ಕೆಂದೇ ಶರಣರು ಸೂಚಿಸಿದ್ದ ಷಟ್‌ಸ್ಥಲಗಳ ಮಾದರಿಯಲ್ಲಿ 101 ಸ್ಥಳಗಳ ಬೊಂತೆಯಾದ ಸಂಸ್ಕೃತ ಭೂಯಿಷ್ಠ ಸಿದ್ಧಾಂತ ಶಿಖಾಮಣಿಯನ್ನು ಸೃಷ್ಟಿಸಿಕೊಂಡರು. ವೇದ, ಆಗಮ, ಶಾಸ್ತ್ರಗಳಲ್ಲಿನ ಸಾಕಷ್ಟು ಅಂಶಗಳನ್ನು ಹೆಕ್ಕಿತೆಗೆದು ತಮ್ಮ ಮೂಗಿನ ನೇರಕ್ಕೆ ಇವರಲ್ಲಿ ತುರುಕಿದರು. ಇಲ್ಲದ ಸಂಗತಿಗಳನ್ನೆಲ್ಲಾ ಈ ಸಿದ್ಧಾಂತ ಶಿಖಾಮಣಿಯ ಹೆಸರಿನಲ್ಲಿ ಪ್ರಚುರಪಡಿಸಿಕೊಂಡು ಹೊರಟರು.

12ನೇ ಶತಮಾನದ ಯಾವುದೇ ಶರಣ ಚಳುವಳಿ ಸಂದರ್ಭದಲ್ಲಿ, ಎಲ್ಲಿಯೂ ಕೂಡಾ ಈ ಚತುರಾಚಾರ್ಯರ ಬಗೆಗಾಗಲೀ ಅಥವಾ ಪಂಚಪೀಠಾಧಿಪತಿಗಳ ಬಗೆಗಾಗಲಿ ಲವಲೇಶದಷ್ಟೂ ಇತಿಹಾಸ ದೊರೆಯುವುದಿಲ್ಲ. ಇವರೆಲ್ಲಾ 14 ಮತ್ತು 15ನೇ ಶತಮಾನದ ಸಂದರ್ಭದಲ್ಲಿ ಅಸ್ತಿತ್ವ ರೂಪಿಸಿಕೊಳುತ್ತಾ ಸಾಗಿ ಬಂದವರು ಎಂಬುದು ನಿರ್ವಿವಾದ. ಮೊದಲು ಈ ಚತುರಾಚಾರ್ಯರೆಲ್ಲ ತಮ್ಮನ್ನು ತಾವು ಭಾರದ್ವಾಜ ಗೋತ್ರದವರೆಂದು ಕರೆದುಕೊಳ್ಳುತ್ತಿದ್ದರು. ನಿಮ್ನ ವರ್ಗದ ಭಕ್ತ ಸಮುದಾಯ ಜಾಸ್ತಿಯಾಗತೊಡಗಿದಂತೆ ಕ್ರಮೇಣ ಶಿವಗೋತ್ರಕ್ಕೆ ಗಂಟು ಬಿದ್ದರು. ತಮ್ಮದು ನಂದಿ, ವೀರಭದ್ರ ಹಾಗೂ ವೃಷಭ ಗೋತ್ರಗಳೆಂದು ಹೇಳಿಕೊಳ್ಳುತ್ತಾ ಪುರೋಹಿತ ಶಾಹಿ ವ್ಯವಸ್ಥೆಯನ್ನು ಈ ಜನರ ಮೇಲೆ ತಣ್ಣಗೆ ಬಲಗೊಳಿಸಿದರು.

ಈ ಪಂಚಪೀಠಾಧಿಶ್ವರರು ಎಂದು ಕೂಡಾ ಬಸವ ತತ್ವಗಳನ್ನು ಪ್ರತಿಪಾದಿಸಿದವರೇ ಅಲ್ಲ. 19ನೇ ಶತಮಾನದ ಅಂತ್ಯ ಹಾಗೂ 20ನೇ ಶತಮಾನದ ಆದಿ ಭಾಗದಲ್ಲಿನ ಇತಿಹಾಸವನ್ನು ಸುಮ್ಮನೇ ಗಮನಿಸಿದಾಗ ಎಲ್ಲೆಡೆಯೂ ಲಿಂಗಾಯತ ಪದದ ಬಳಕೆಯೇ ಹೆಚ್ಚು ಪ್ರಚಲಿತವಿದ್ದುದು ನಮಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಕೇವಲ ಸಿಂಹಾಸನ, ಛತ್ರಿ, ಚಾಮರ, ಪ್ರಸಾದ, ದಕ್ಷಿಣೆ, ಸೇವೆ ಎಂದು ನೂರೆಂಟು ಶೋಷಣೆಗಳ ಮುಖಾಂತರ ಒಂದು ಇಡೀ ಮಾನವ ಸಮುದಾಯವನ್ನು ಯುಕ್ತಿಯಿಂದ ಆಳುತ್ತಾ ಬಂದ ಚತುರವರ್ಗ ಇದು. ಗುಡಿ ಸಂಸ್ಕೃತಿ ಧಿಃಕ್ಕರಿಸಿದ ಬಸವಣ್ಣನಿಗೆ ಸವಾಲಾಗಿ ಲಿಂಗದಲ್ಲಿ ರೇಣುಕನನ್ನು ಸೃಷ್ಟಿಸಿದ ಜನರಿವರು.

20ನೇ ಶತಮಾನದ ಆರಂಭದಲ್ಲಿ ಸೊಲ್ಲಾಪುರದ ದಾನಿ ವಾರದ ಮಲ್ಲಪ್ಪನವರಿಗೆ ಗಂಟು ಬಿದ್ದ ಈ ಚತುರಾಚಾರ್ಯರು ಸ್ಥಾಪಿಸಿದ್ದ ಲಿಂಗೀ ಬ್ರಾಹ್ಮಣ ಗ್ರಂಥಮಾಲೆ ಯಲ್ಲಿ ಇವರು ಬ್ರಾಹ್ಮಣ ಸಮುದಾಯದವರೆಂಬುದು ಸ್ಪಷ್ಟವಾಗಿ ನಿರೂಪಿತವೂ ಆಗಿದೆ. ಉತ್ತರ ಕರ್ನಾಟಕದ ಲಿಂಗಾಯತ ಸಮುದಾಯದಲ್ಲಿ ವೀರಶೈವ ಎಂಬ ಪದ ಯಾವತ್ತೂ ಬಳಕೆಯಲ್ಲಿ ಇರಲೇ ಇಲ್ಲ. 20ನೇ ಶತಮಾನದ ಆದಿ ಭಾಗದಿಂದ ಈ ಪದವನ್ನು ಪ್ರಚುರ ಪಡಿಸುವ



ಪೀಠಾರೋಹಣ ನಂತರ ಧಾರವಾಡದಲ್ಲಿರುವ ಉಳವಿ ಚನ್ನಬಸವಣ್ಣನವರ ದಿವ್ಯಾಲಯ ಸಂದರ್ಶನ



ಮಾಜಿ ಸಂಸತ್ ಸದಸ್ಯ ಶರಣ.ಮಂಜುನಾಥ ಕುನ್ನೂರು ಅವರಿಗೆ ಪೂಜ್ಯ ಮಾತಾಜಿಯವರಿಂದ ಸತ್ಕಾರ. ಹಿರಿಯ ನ್ಯಾಯವಾದಿ ಎ.ಸಿ.ಚಾಕಲಬ್ಬಿ ಚಿತ್ರದಲ್ಲಿದ್ದಾರೆ.



ಸಚಿವ ಜನಾರ್ಧನ ರೆಡ್ಡಿಯವರು ಬಸವ ಮಂಟಪದ ಉದ್ಘಾಟನೆಗೂ ಮೊದಲು ಸಮಾಲೋಚಿಸುತ್ತಿರುವುದು



ಅಮೃತ ಶಿಲಾ ಬಸವ ಮೂರ್ತಿಯ ಪ್ರತಿಷ್ಠಾಪನೆಯ ನಂತರ ಕಾರ್ಯಕ್ರಮ ಉದ್ಘಾಟನೆ ಸಚಿವ ಜನಾರ್ಧನ ರೆಡ್ಡಿ ಅವರಿಂದ




ಬಸವ ಮೂರ್ತಿಯ ಅನಾವರಣ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರಿಂದ



ಕಾರ್ಯಕ್ರಮದ ವೇದಿಕೆಯ ಒಂದು ನೋಟ, ಪೂಜ್ಯ ಮಾತಾಜಿ, ಸಚಿವ ಜನಾರ್ಧನ ರೆಡ್ಡಿ, ಶಾಸಕ ಸೋಮಶೇಖರ ರೆಡ್ಡಿ, ತಿಪ್ಪಣ್ಣ, ಸತೀಶ್ ಬಾಬು ಮತ್ತಿತರರು



ದಿ.12-4-2010 ರಂದು ಪೀಠಾರೋಹಣ ಉದ್ಘಾಟನೆ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರಿಂದ



ಪೀಠಾರೋಹಣ ಮಾಡಿದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ದ್ವಿತೀಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಯವರಿಗೆ ಪುಷ್ಪವೃಷ್ಟಿ ಮತ್ತು ಆರತಿ

****

ಯತ್ನಕ್ಕೆ ಈ ಪಂಚಪೀಠಾಧಿಪತಿಗಳು ಮುಂದಾದರು. ಒಂದು ವೇಳೆ ವೀರಶೈವ ಪದ ಬಳಕೆಯೇ ನಿಜವಾಗಿದ್ದಲ್ಲಿ 1876ರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಸ್ಥಾಪಿಸಿದ್ದ ಉಚಿತ ವಿದ್ಯಾರ್ಥಿ ನಿಲಯಕ್ಕೆ ಲಿಂಗಾಯತ ಫ್ರೀ ಬೋರ್ಡಿಂಗ್ ಎಂದು ಹೆಸರಿಡುತ್ತಿರಲಿಲ್ಲ. 1885ರಲ್ಲಿ ಸ್ಥಾಪಿಸಲಾದ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಲಿಂಗಾಯತ ಎಂಬ ಪದ ಹೊಂದುತ್ತಿರಲಿಲ್ಲ. 1916ರಲ್ಲಿ ಸ್ಥಾಪಿತವಾದ ಬೆಳಗಾವಿಯ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿ ಕೂಡಾ ಲಿಂಗಾಯತ ಎಂಬ ಪದ ಹೊಂದಬೇಕಾಗಿರಲಿಲ್ಲ. ಅಷ್ಟೇಕೆ ಬೆಂಗಳೂರಿನ ಟೌನ್ ಹಾಲ್ ಕಟ್ಟಿಸಿದ ಪುಟ್ಟಣ್ಣಶೆಟ್ಟರೂ ಕೂಡಾ ಲಿಂಗಾಯತ ಹೆಸರಿನಲ್ಲಿಯೇ ವಿದ್ಯಾ ಸಂಸ್ಥೆ ಸ್ಥಾಪಿಸಿದವರು. ಆದಿ ಕಾಲದಿಂದಲೂ ಲಿಂಗಾಯತ ಧರ್ಮವನ್ನು ಹೊಲಬು ಗೆಡಿಸಿದ ಕೀರ್ತಿ ಈ ಪಂಚಪೀಠಾಧೀಶ್ವರರಿಗೆ ಸಲ್ಲಬೇಕು. ಹಿರೇಮಠರು, ಆರಾಧ್ಯರು, ಐಯ್ಯನೋರು ಎಂಬ ಶಿರೋನಾಮೆಗಳಲ್ಲಿ ತಾವು ವೀರಮಾಹೇಶ್ವರರೆಂದು ಪುರೋಹಿತ ವ್ಯವಸ್ಥೆಯನ್ನು ಪೋಷಿಸುತ್ತಲೇ ಮತ್ತೊಂದೆಡೆ ತಾವೆಲ್ಲಾ ಬೇಡ ಜಂಗಮ, ಬುಡುಗ ಜಂಗಮರು ಎಂದು ಸುಳ್ಳು ಹೇಳಿ ಸಾಂವಿಧಾನಿಕ ಮೀಸಲಾತಿಗಳನ್ನು ಕಬಳಿಸುವ ಹುನ್ನಾರ ಮಾಡುತ್ತಿದ್ದಾರೆ. ಮಾನವ ಧರ್ಮಕ್ಕೆ ಜಯವಾಗಲಿ ಎಂದು ಬೊಗಳೆ ಬಿಡುತ್ತಾ ಇಂತಿಷ್ಟೇ ಎತ್ತರದ ಸೀಟು ಬೇಕು, ಅಡ್ಡಪಲ್ಲಕ್ಕಿಯೇ ಆಗಬೇಕು ಎಂದು ಸ್ವಯಂಘೋಷಿತ ದೇವಮಾನವರಂತೆ ಪೋಸು ಕೊಡುತ್ತಿದ್ದಾರೆ. ಇಂತಹ ಸುಳ್ಳು, ತಟವಟ, ಶೋಷಣೆಗಳೆಲ್ಲಾ ಜನರಿಗೆ ಅರ್ಥವಾಗುವುದು ಯಾವಾಗ?

(ಪ್ರಜಾವಾಣಿ: 23-4-2010)

ಲಿಂಗಾಯತರು ಯಾರು ?

- ಎನ್-ಪುಟ್ಟರುದ್ರ

ಪ್ರಜಾವಾಣಿ ಸಂಚಿಕೆಯಲ್ಲಿ ವಾಚಕರ ಪತ್ರಕ್ಕೆ ಪ್ರತಿಕ್ರಿಯೆಯಾಗಿ ರಾಜ್ಯಪ್ರಗತಿ ಪತ್ರಿಕೆಯ ಅಭಿಮಾನಿ ಓದುಗರಾದ ಹಿರಿಯ ಚೇತನ ಎನ್. ಪುಟ್ಟರುದ್ರ ಅವರು ನೀಡುರುವ ಉತ್ತರದ ಪೂರ್ಣ ಪಾಠವನ್ನಿಲ್ಲಿ ಪ್ರಕಟಿಸಲಾಗಿದೆ. - ಸಂ

ವೀರಶೈವರು ಹೇಗೆ ಹಿಂದೂಗಳಲ್ಲ? (ಪ್ರಜಾವಾಣಿ - ವಾಚಕರವಾಣಿ - ಫೆಬ್ರವರಿ) ಎಂಬ ಶೀರ್ಷಿಕೆಯಲ್ಲಿ ಯಾದಗಿರಿಯ ಶರಣ ಜಿ.ಎಸ್. ಬಸವರಾಜ ಶಾಸ್ತ್ರಿಯವರು ಹಿಂದೂ ಎಂಬುದು ಮತವೂ ಅಲ್ಲ, ಧರ್ಮವೂ ಅಲ್ಲ, ಅದು ಕೇವಲ ದೇಶವಾಚಕ ಶಬ್ದವಾದ್ದರಿಂದ ಈ ದೇಶದಲ್ಲಿರುವ ಮತಗಳೆಲ್ಲವನ್ನೂ ಹಿಂದೂ ಪದದೊಂದಿಗೆ ಬಳಸಬೇಕು ಎಂಬ ಅಭಿಪ್ರಾಯ ಪಡುತ್ತಾ, ವೀರಶೈವ ಮತವನ್ನು ಹಿಂದೂ ವೀರಶೈವ ಎಂದು ಉಚ್ಚರಿಸುವುದು ಸರಿ ಎಂದು ಹೇಳಿ ತಮ್ಮ ದೇಶ ಪ್ರೇಮವನ್ನು ಮೆರೆದಿದ್ದಾರೆ. ಅವರ ಈ ಅಭಿಪ್ರಾಯವು ವೀರಶೈವ ಮತಕ್ಕೆ ಮಾತ್ರ ನೂರಕ್ಕೆ ನೂರರಷ್ಟು ಅನ್ವಯವಾಗುತ್ತದೆ. ಏಕೆಂದರೆ ಹಿಂದೂ ಧರ್ಮವೆಂಬ ವೃಕ್ಷದ ಒಂದು ಪ್ರಭೇದವಾದ ಶೈವ ಪರಂಪರೆಯ ಸಪ್ತ ಶೈವಗಳಲ್ಲಿ ವೀರಶೈವವು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನಲ್ಲಿ ವೀರತಮವಾದ ಭಕ್ತಿಯನ್ನು ಬೋಧಿಸುತ್ತದೆ. ಅದು ಬಹುದೇವತೋಪಾಸನೆಯ ಹಾಗೂ ಚಾತುರ್ವರ್ಣ ಸಾಮಾಜಿಕ ವ್ಯವಸ್ಥೆ ಹೊಂದಿರುವ ಹಿಂದೂ ಧರ್ಮದ ಒಂದು ಟಿಸಿಲು ಮಾತ್ರವೇ ವಿನಾ ಸ್ವತಂತ್ರ ಧರ್ಮವಲ್ಲ. ವೈದಿಕ ಧರ್ಮದ ಆಚರಣೆಗಳಾದ ಗಂಗಾಪೂಜೆ, ಅಗ್ನಿಪೂಜೆ, ಗೋ ಪೂಜೆ , ನಾಗರ -ನವಗ್ರಹ-ವಿನಾಯಕ-ವೀರಭದ್ರ-ಸ್ಥಾವರ ಲಿಂಗ ಪೂಜೆ ಇತ್ಯಾದಿಗಳನ್ನು ರೂಢಿಸಿಕೊಂಡಿರುವುದಲ್ಲದೆ ಜಾತಕ, ಪಂಚಾಗ ಜ್ಯೋತಿಷ್ಯಗಳಲ್ಲಿ ನಂಬಿಕೆಯನ್ನಿರಿಸಿಕೊಂಡಿದೆ. ಶೂದ್ರ ವೀರಶೈವರಲ್ಲಿ ಮಾಂಸಾಹಾರಿಗಳೂ ಸಹ ಇದ್ದಾರೆ.

ವೀರಶೈವ, ಲಿಂಗಾಯತ ಪದಗಳನ್ನು ಪರ್ಯಾಯವಾಗಿ ಬಳಸುವುದು ಘೋರ ವಿಪರ್ಯಾಸವೇ ಸರಿ. ಆದ್ದರಿಂದ ಈ ಸಂದರ್ಭದಲ್ಲಿ ಲಿಂಗಾಯತದ ಬಗ್ಗೆ ನನ್ನ ಅಭಿಪ್ರಾಯ ತಿಳಿಸಲಿಚ್ಛಿಸುತ್ತೇನೆ. ದೇಶವಾಚಕ ಶಬ್ದ ಹಾಗೂ ನಮ್ಮ ರಾಷ್ಟ್ರದ ಸಾಂಸ್ಕೃತಿಕ ಪರಂಪರೆಯ ಪರಿಧಿ -ಇವುಗಳ ಗಣನೆಯಲ್ಲಿ ಮಾತ್ರ ಲಿಂಗಾಯತರು ಹಿಂದೂಗಳೆನಿಸಿಕೊಳ್ಳುವರೇ ವಿನಾ ಧರ್ಮದ ನೆಲೆಗಟ್ಟಿನಲ್ಲಲ್ಲ. ವೇದ, ಆಗಮಗಳ ಮಾನ್ಯತೆಯನ್ನು ಪ್ರಶ್ನಿಸಿದ ಲಿಂಗಾಯತ ಧರ್ಮವು ಅಹಿಂದು ಹಾಗೂ ಅವೈದಿಕ ಧರ್ಮವಾಗಿದೆ ಎಂಬುದನ್ನು ಮರೆಯಬಾರದು. ಅದು ವಿಶ್ವಗುರು ಬಸವಣ್ಣನವರು ಕೊಟ್ಟ ವಿನೂತನ ಧರ್ಮ; "ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ? ಹುಸಿಮಾತನಾಡಿ ಕೆಡದಿರಿ, ಲಿಂಗಾಯತಕೆ ಬಸವನೇ ಕರ್ತೃ ಸರ್ವಜ್ಞ" ಎಂದು ಸರ್ವಜ್ಞ ಕವಿಯು ತಮ್ಮ ವಚನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಲಿಂಗಾಯತವು ಬೇರಾವುದೇ ವೃಕ್ಷದ ಕೊಂಬೆಯಲ್ಲ, ಟಿಸಿಲಲ್ಲ, ಸ್ವತಂತ್ರ ವೃಕ್ಷ. ಅದರ ಸಂಹಿತೆಯಾಗಿದೆ -ಅಚ್ಚ ಕನ್ನಡದಲ್ಲಿರುವ ವಚನ ಶಾಸ್ತ್ರ. ಲಿಂಗಾಯತರು ಪರಾತ್ಪರ ವಸ್ತು ಲಿಂಗದೇವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ದೀಕ್ಷಾ ಸಂಸ್ಕಾರದ ಮೂಲಕ ಅಂಗದ ಮೇಲೆ ಧರಿಸಿಕೊಂಡು ಅದನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸಿ, ಧ್ಯಾನಿಸತಕ್ಕ ಏಕದೇವೋಪಾಸಕರೇ ವಿನಾ ತ್ರಿಮೂರ್ತಿಗಳನ್ನಾಗಲಿ, ಇತರೇ ದೇವತೆಗಳನ್ನಾಗಲಿ ಪೂಜಿಸುವವರಲ್ಲ. ಲಿಂಗಾಯತ ಧರ್ಮವು ಇವನಾರವ, ಇವನಾರವ ಎಂದೆನ್ನದೆ ಇವ ನಮ್ಮವ, ಇವ ನಮ್ಮವ ಎಂದು ಎಲ್ಲರನ್ನೂ ಇಂಬಿಟ್ಟುಕೊಳ್ಳುವ ಧರ್ಮ. ಅಸ್ಪೃಶ್ಯತೆ, ಅಂಧಶ್ರದ್ಧೆ, ಮೂಢ ನಂಬಿಕೆಗಳನ್ನು ಖಂಡಿಸುವ ಧರ್ಮ. ಹಿಂದೂ ಧರ್ಮದ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಮಾನ್ಯ ಮಾಡದಿರುವುದರಿಂದ ಚಾತುರ್ವರ್ಣದ ವಿಭಜನಾರೀತ್ಯ ಪರಿಗಣಿಸಲ್ಪಡಬೇಕಾದ ಶೂದ್ರತ್ವದಿಂದ ಹೊರಗುಳಿದ ಸ್ವತಂತ್ರ ಧರ್ಮವಾಗಿದೆ. ಕೇವಲ ಸರ್ವೇಜನಾ ಸುಖಿನೋಭವಂತು ಎಂದು ಹೇಳದೆ ಸಕಲ ಜೀವಾತ್ಮರಿಗೆ ಲೇಸನು ಬಯಸುವವನೇ ಕುಲಜನು ಎಂದು ಹೇಳಿದ ಉತ್ಕೃಷ್ಟತೆಯ ಧರ್ಮವಾಗಿದೆ. ಕಾಯಕ -ದಾಸೋಹ- ಸಮಾನತೆಯ ಹಿರಿಮೆಯನ್ನು ಮನವರಿಕೆ ಮಾಡಿಕೊಟ್ಟು, ದೇವ -ಭಕ್ತರ ನಡುವೆ ಪೂಜಾರಿಯ ಮಧ್ಯಸ್ಥಿಕೆಯನ್ನು ತಪ್ಪಿಸಿದ, ಅಹಿಂಸಾ ತತ್ವ ಪ್ರತಿಪಾದಿಸುವ ಯಜ್ಞ ಯಾಗವನ್ನು ನಿಷೇಧಿಸಿದ ಮಹಾನ್ ಧರ್ಮವಾಗಿದೆ ಲಿಂಗಾಯತ ಧರ್ಮ. ಹೀಗಾಗಿ ಲಿಂಗಾಯತವು ಅಹಿಂದು ಧರ್ಮ ಎನ್ನದೆ ಗತ್ಯಂತರವಿಲ್ಲ.

ಕಲ್ಯಾಣ ಕಿರಣ ಓದುಗ ಶರಣ ಬಂಧುಗಳಲ್ಲಿ ಮನವಿ

ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 - 150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ಪೂರ್ಣ ವಿಳಾಸ ಮತ್ತು ಪಿನ್‌ಕೋಡ್ ಕೊಡದೇ ಇರುವವರು ಕಡ್ಡಾಯವಾಗಿ ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ನಿಮ್ಮ ವಿಳಾಸಗಳನ್ನು ತಿಳಿಸಬೇಕಾಗಿ ಕೋರುತ್ತೇವೆ.

ದೂರವಾಣಿಗಳ ಸಂಖ್ಯೆಗಳು: 8970898205, 9620058492, 8892912123, 7760627640

ಬಸವ ಗಂಗೋತ್ರಿಯಲ್ಲಿ ಬಸವೋತ್ಸವ
- ಮೇ 25, 26 ಮತ್ತು 27ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು "ಬಸವ ಗಂಗೋತಿ ಆಶ್ರಮ" ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ|| ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ -ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು , ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದೆಯಾದರೂ ಈ ವರ್ಷದಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ವೈಶಾಖ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು - ಹೀಗೆ 3 ದಿವಸಗಳ ಸಮಾವೇಶವನ್ನು ಮೇ ತಿಂಗಳಿನ ದಿ. 25, 26 ಮತ್ತು 27ರಂದು ಸಂಯೋಜಿಸಲಾಗಿದೆ. ದಿ. 25ರಂದು ಬೆಳಿಗ್ಗೆ 10-30ರಿಂದ ಬಸವೋತ್ಸವದ ಉದ್ಘಾಟನಾ ಸಮಾವೇಶ, ಸಂಜೆ -5-30ರಿಂದ ಧರ್ಮ ಚಿಂತನ ಗೋಷ್ಠಿ. ದಿ. 26ರಂದು ಬೆಳಿಗ್ಗೆ 8-30ಕ್ಕೆ 770 ಜನ ಶರಣರಿಂದ ಇಷ್ಟಲಿಂಗ ಪೂಜೆ, 11-30ಕ್ಕೆ ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣ, ಸಂಜೆ -5-30ರಿಂದ ಧರ್ಮ ಚಿಂತನಗೋಷ್ಠಿ, ದಿ. 27 ಪೌರ್ಣಿಮೆಯಂದು ಜಗದ್ಗುರು ಶ್ರೀ ಚನ್ನಬಸವೇಶ್ವರ ಜ್ಞಾನ ಪೀಠ ಸ್ಥಾಪನೆ ಮತ್ತು ಪೀಠಾರೋಹಣ. ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಅವರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ; ನಂತರ ಸಮಾರೋಪ ಸಮಾರಂಭ.

ಪೂಜ್ಯ ರಾಮದೇವ ಬಾಬಾ ಅವರಿಂದ ತರಬೇತಿ ಪಡೆದ ಮೈಸೂರಿನ ಪತಂಜಲಿ ಯೋಗಾಲಯದ ಶರಣ. ಮಧು ಅವರು ಪ್ರತಿ ದಿನ ಬೆಳಿಗ್ಗೆ 5 ರಿಂದ 6-30ರವರೆಗೆ ಪ್ರಾಣಾಯಾಮ, ಧ್ಯಾನ, ಯೋಗಾಸನದ ತರಬೇತಿಯನ್ನು 3 ದಿವಸಗಳ ಕಾಲ ನೀಡಲಿದ್ದಾರೆ.

ದಿ. 24-5-2010ರಿಂದ ದಿ. 28-5-2010ರ ಬೆಳಗಿನವರೆಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಬರಲಿರುವ ಶರಣ ಬಂಧುಗಳಿಗೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕ ರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದದ ವ್ಯವಸ್ಥೆಯನ್ನು ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	100ರೂ

770 ಅಮರ ಗಣಂಗಳ ಸ್ಮರಣಾರ್ಥ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಮೇಲೆ ತಿಳಿಸಿದಂತೆ ದಿ. 26ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದ್ದು ಪ್ರವೇಶ ಶುಲ್ಕ 100ರೂ. 250ರೂ ಮತ್ತು ಮೇಲೆ ಕೊಟ್ಟವರು ಇದಕ್ಕಾಗಿ ಪ್ರತ್ಯೇಕ ಶುಲ್ಕ ಕೊಡಬೇಕಾಗಿಲ್ಲ. ಇದರಿಂದ ಸಂಗ್ರಹವಾಗುವ ಹಣವನ್ನು ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ 108 ಅಡಿಯ ಬಸವ ಪುತ್ಥಳಿಗಾಗಿ ಬಳಸಲಾಗುವುದು.

ಬಸವೋತ್ಸವದ ಯಶಸ್ಸಿಗಾಗಿ ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು, ಸ್ವತಃ ಉದಾರವಾಗಿ ದೇಣಿಗೆಯನ್ನು ನೀಡುವುದಲ್ಲದೆ ರಸೀತಿ ಪುಸ್ತಕಗಳನ್ನು ಪಡೆದುಕೊಂಡು ದೇಣಿಗೆಯನ್ನು ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ -ಧಾನ್ಯ, ಅಕ್ಕಿ- ಬೇಳೆ, ಬೆಲ್ಲ -ಸಕ್ಕರೆ, ತರಕಾರಿ ಇತ್ಯಾದಿ ವಸ್ತುಗಳನ್ನು ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223,224,226 ರೂಟ್‌ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ: 9448386717

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010
ಮೊ: 9663385657

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಭೀಮಣ್ಣ ಖಂಡ್ರೆಯವರಿಗೊಂದು ಕಿವಿಮಾತು

- ಎನ್. ಪುಟ್ಟರುದ್ರ

ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ ಏರ್ಪಡಿಸಲಾಗಿದ್ದ ಅ.ಭಾ.ವೀ. ಮಹಾಸಭೆ ಹಾಗೂ ಶಿವಯೋಗ ಮಂದಿರದ ಶತಮಾನೋತ್ಸವ ಸಂದರ್ಭದಲ್ಲಿ ಮುಜುಗರ ಪಡುವ ಸನ್ನಿವೇಶಗಳು ಸಾಮಾನ್ಯವಾಗಿವೆ ಎಂದು ಹೇಳಲು ದುಃಖವಾಗುತ್ತದೆ. ಗದುಗಿನ ಡಾ|| ತೋಂಟದ ಸಿದ್ಧಲಿಂಗ ಸ್ವಾಮಿಗಳು ವಾಸ್ತವಿಕ ಸತ್ಯವನ್ನು ತಿಳಿಸಿದ್ದರಿಂದ ಸಮಾವೇಶದಲ್ಲಿ ಹಲ್ಲೆ ಮಾಡಿದುದು, ತಮಗೆ ಎತ್ತರದ ಆಸನ ಹಾಕಲಿಲ್ಲವೆಂದು ಪಂಚಪೀಠಾಧಿಪತಿಗಳು ಕಾರ್ಯಕ್ರಮವನ್ನೇ ಬಹಿಷ್ಕರಿಸಿದುದು ಈ ಶತಮಾನದಲ್ಲಿ ಊಹಿಸಲಿಕ್ಕೂ ಆಗದ ಅಸಹ್ಯ ಮತ್ತು ಆಭಾಸಕಾರಿ ಘಟನೆಗಳು.

ಆದರೆ ಇವುಗಳಿಗೆ ತದ್ವಿರುದ್ಧವಾಗಿ ಲಿಂಗಾಯತ ಧರ್ಮಾನುಯಾಯಿಯಲ್ಲದ ಯು.ಪಿ.ಎ. ಅಧ್ಯಕ್ಷೆ ಸೋನಿಯಾ ಗಾಂಧಿಯವರು ಸಮಾರಂಭಕ್ಕೆ ದಯಮಾಡಿಸಿದಾಗ ಸಮಪಾಲು - ಸಮಬಾಳು ತತ್ವದಡಿ ವರ್ಗರಹಿತ ಸಮಾಜವನ್ನು ನಿರ್ಮಿಸಲು ಬಸವಣ್ಣನವರು

ಹಾಕಿಕೊಟ್ಟ ಹಾದಿಯನ್ನು ಪ್ರಸ್ತಾಪಿಸುತ್ತಾ, ಎನ್ನ ದೇಹವೇ ದೇಗುಲ ಎಂದು ಪ್ರತಿಪಾದಿಸುವ ಮೂಲಕ ಪ್ರತಿ ಮನುಷ್ಯರಲ್ಲಿ ದೇವರನ್ನು ಗುರ್ತಿಸಿದರು ಬಸವಣ್ಣನವರು ಎಂದು ಹೇಳಿ, ಅವರು ವಚನಗಳ ಮೂಲಕ ಸಾರಿದ ವೈಚಾರಿಕತೆ ಇಂದಿಗೂ ಪ್ರಸ್ತುತವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದು ನೂರಕ್ಕೆ ನೂರರಷ್ಟು ಸತ್ಯವೇ ಸರಿ. ಅವರು ಸಮಾರಂಭಕ್ಕೆ 12ನೆಯ ತಾರೀಖು ದಯಮಾಡಿಸಿದ್ದಾಗ ವೀರಶೈವ -ಲಿಂಗಾಯತ ಸಮಾಜವನ್ನು ಪ್ರತ್ಯೇಕ ಧರ್ಮವೆಂದು ಪರಿಗಣಿಸಿ ಜನಗಣತಿಯ ಫಾರಂನಲ್ಲಿ ಪ್ರತ್ಯೇಕ ಕಾಲಂ ಒದಗಿಸಬೇಕೆಂಬ ಮಹಾಸಭೆಯ ಬೇಡಿಕೆಯ ಬಗ್ಗೆ ಚಕಾರವೆತ್ತಲಿಲ್ಲವಂತೆ. ಅದು ಸರಿಯೆ! ಅಲ್ಲವೇ ? ಮಾನ್ಯ ಖಂಡ್ರೆಯವರೇ?

ವೀರಶೈವ ಪದದಲ್ಲಿಯೇ ಶೈವ ಪದವು ಸೇರಿಕೊಂಡಿದೆ. ಹಿಂದು ಧರ್ಮವೆಂಬ ವೃಕ್ಷದಲ್ಲಿ ಶೈವವು ಒಂದು ಕೊಂಬೆಯಾಗಿದ್ದು, ಅದರಲ್ಲಿ ವೀರಶೈವವು ಒಂದು ಟಿಸಿಲಾಗಿರುವಾಗ ಜನಗಣತಿಯ ಫಾರಂನಲ್ಲಿ ಪ್ರತ್ಯೇಕ ಕಾಲಂ ಒದಗಿಸಲು ಹೇಗೆ ಸಾಧ್ಯ? ಅರ್ಹತೆಗಳನ್ನು ಪಡೆದಿರುವ ಸರ್ವ ಸ್ವತಂತ್ರ ವೃಕ್ಷವಾದ ಲಿಂಗಾಯತ ಧರ್ಮಕ್ಕೆ ಮಾತ್ರ ಅದು ಸಾಧ್ಯವೆಂದು ಮನಗಂಡು ಅದರಂತೆ ಕಾರ್ಯಾಸಕ್ತರಾಗಲು ದಯವಿಟ್ಟು ಶ್ರಮಿಸಿರಿ ಎಂಬುದೇ ನನ್ನ ಕಳಕಳಿಯ ಮನವಿ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಬಾಗಲಕೋಟೆ ರಾಷ್ಟ್ರೀಯ ಬಸವ ದಳ
ನೂತನ ಬಸವ ಮಂಟಪ ಉದ್ಘಾಟನೆಗೆ ಆಹ್ವಾನ

ಶರಣ ಬಂಧುಗಳೇ,

ಕೂಡಲ ಸಂಗಮ ಸುಕ್ಷೇತ್ರಕ್ಕೆ ಹೆಬ್ಬಾಗಿಲಿನಂತಿರುವ ಬಾಗಲಕೋಟೆಯಲ್ಲಿ 1987ರಲ್ಲಿ ಪರಮ ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರವಚನವನ್ನು ಮಾಡಿ, ರಾಷ್ಟ್ರೀಯ ಬಸವ ದಳವನ್ನು ಪ್ರಾರಂಭಿಸಿದರು. ರಾಷ್ಟ್ರೀಯ ಬಸವ ದಳವು ನವನಗರ ಪ್ರದೇಶದಲ್ಲಿ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನವನ್ನು ಪಡೆದಿದ್ದು ನೂತನ ಬಸವ ಮಂಟಪವನ್ನು ನಿರ್ಮಿಸಿದೆ.

ಬಸವ ಮಂಟಪದ ಗುರು ಪ್ರವೇಶವು ದಿ. 29-5-2010ರಂದು ಸಂಜೆ 5 ಗಂಟೆಗೆ, ಅಮೃತ ಶಿಲಾ ಪುತ್ಥಳಿಯ ಪ್ರತಿಷ್ಠಾಪನಾ ಸಮಾರಂಭವು ದಿ, 30-5-2010ರಂದು ಬೆಳಿಗ್ಗೆ 9ರಿಂದ ನಡೆಯಲಿದೆ. ಕಾರ್ಯಕ್ರಮವು ಬೆಳಿಗ್ಗೆ 10-30ರಿಂದ ನಡೆಯಲಿದ್ದು ಅನೇಕ ಪೂಜ್ಯರು, ರಾಜಕೀಯ ಧುರೀಣರು, ಗಣ್ಯರು ಭಾಗವಹಿಸಲಿದ್ದಾರೆ. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೃತ್ಪೂರ್ವಕವಾಗಿ ಆಹ್ವಾನಿಸುತ್ತಿದ್ದೇವೆ.

ಶರಣ.ಸಿ.ಜಿ.ಅಂಗಡಿ
ಗೌರವಾಧ್ಯಕ್ಷರು

ಶರಣ. ಎಂ.ಆರ್.ಹುಲ್ಯಾಳ
ಕಾರ್ಯಾಧ್ಯಕ್ಷರು

ಸಂಪರ್ಕಿಸುವ ವಿಳಾಸ :

ಬಸವ ಮಂಟಪ, ಸೆಕ್ಟರ್ ನಂ.322, ಪ್ಲಾಟ್ ನಂ.1, ಮುಖ್ಯರಸ್ತೆ
(ಚಂದನಾ ಚಲನಚಿತ್ರ ಟಾಕೀಸ್ ಎದುರಿಗೆ), ನವನಗರ, ಬಾಗಲಕೋಟೆ.

ಎಂ.ಆರ್.ಹುಲ್ಯಾಳ - 9731319048, ಸಿ.ಜಿ.ಅಂಗಡಿ -9663090089
ಎಸ್.ಎಸ್.ಅಂಗಡಿ - 9880807589

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳ ಪರಿಚಯ

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೋಕಿನ ಖಟಕ ಚಿಂಚೋಳಿ ಎಂಬ ಗ್ರಾಮದಲ್ಲಿ ಶರಣ ದಂಪತಿಗಳಾದ ಮಲ್ಲಯ್ಯ ಸ್ವಾಮಿ ಮತ್ತು ಕಸ್ತೂರಮ್ಮನವರ ಹಿರಿಯ ಮಗನಾಗಿ ಪೂಜ್ಯ ಸ್ವಾಮೀಜಿ 1972ರ ನವೆಂಬರ್ 14ರಂದು ಜನಿಸಿದರು. ಜನ್ಮನಾಮ ಶಿವಕುಮಾರ. ಇವರಿಗೆ ಒಬ್ಬ ಅಕ್ಕ - ಲಲಿತ ಮತ್ತೊಬ್ಬ ತಮ್ಮ - ಮಹಾರುದ್ರ ಮತ್ತು ಮೂವರು ತಂಗಿಯರು - ಲಕ್ಷ್ಮಿ, ಸುವರ್ಣ, ದಾಕ್ಷಾಯಣಿ.

ಮನೆಯಲ್ಲಿ ಮೊದಲಿನಿಂದಲೂ ಭಕ್ತಿ ಮತ್ತು ಸಂಗೀತದ ವಾತಾವರಣ. ಮನೆಯಲ್ಲಿ ಪ್ರಾಥಮಿಕ ಶಿಕ್ಷಣದಿಂದ ಎಸ್.ಎಸ್.ಎಲ್.ಸಿ. (1987)ವರೆಗೆ ಖಟಕ ಚಿಂಚೋಳಿಯಲ್ಲೇ ಓದಿ, ನಂತರ ಬೀದರಿನ ಕರ್ನಾಟಕ ಕಾಲೇಜಿನಲ್ಲಿ ಲ್ಯಾಬ್ ಟೆಕ್ನೀಷಿಯನ್ ಕೋರ್ಸ್ ಪೂರೈಸಿದರು. ಮುಂದೆ ಬೀದರಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ (1989) ತೇರ್ಗಡೆಯಾಗಿ ಪಡೆದರು. ಅದೇ ಸಮಯದಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನವು ಬೀದರಿನ ಗಣೇಶ ಮೈದಾನದಲ್ಲಿ ಅಖಂಡವಾಗಿ 33 ದಿವಸ ನಡೆಯಿತು. ಆಗ ಕೇಳಿದ ಪ್ರವಚನವು ವಿದ್ಯಾರ್ಥಿ ಶಿವಕುಮಾರನ ಜೀವನಕ್ಕೆ ಒಂದು ಹೊಸ ತಿರುವು ನೀಡಿತು. ಪೂಜ್ಯ ಗುರುಗಳಿಂದ ಇಷ್ಟಲಿಂಗ ದೀಕ್ಷೆ ಹೊಂದಿದರಲ್ಲದೆ ಆಗ ಆರಂಭವಾದ ರಾಷ್ಟ್ರೀಯ ಬಸವ ದಳ, ಬೀದರ ಘಟಕದ ಸಕ್ರಿಯ ಕಾರ್ಯಕರ್ತರಾದರು. ಭಾಲ್ಕಿ ತಾಲ್ಲೋಕಿನ ರಾ.ಬ.ದಳದ ಕಾರ್ಯದರ್ಶಿಯಾಗಿ ಬೀದರ ಘಟಕದ ಸಂಘಟನಾ ಕಾರ್ಯದರ್ಶಿಯೂ ಆದರು. 1996ರಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಸರ್ಕಾರಿ ನೌಕರಿಗೆ ಅವಕಾಶ ಬಂದಿತು. ಅದೇ ಸಮಯದಲ್ಲಿ ದೆಹಲಿಯಲ್ಲಿ ಸಮ್ಮೇಳನ ನಡೆಸುವ ಸಲುವಾಗಿ ಪೂಜ್ಯ ಮಾತಾಜಿಯವರಿಂದ ಕರೆ ಬಂದಾಗ ಶಿವಕುಮಾರ ದೆಹಲಿಗೆ ಧಾವಿಸಿದರು. ಕನ್ನಡ, ಹಿಂದಿ, ಮರಾಠಿ ಮೂರು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರು, ಇಂಗ್ಲೀಷ್ ಮತ್ತು ಉರ್ದುಗಳಲ್ಲಿ ಪರಿಜ್ಞಾನವಿರುವುದರಿಂದ ದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ ನಡೆದ ಬಸವ ಧರ್ಮ ಸಮ್ಮೇಳನಗಳಲ್ಲಿ ಪ್ರಮುಖ ಪಾತ್ರ ವಹಿಸಿದರು.

ಎಂ.ಎ.ಓದಲು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 97-98ರಲ್ಲಿ ಪ್ರವೇಶ ದೊರಕಿಸಿಕೊಂಡರು. ಧರ್ಮಜಾಗೃತಿ ಮತ್ತು ಪ್ರಚಾರದ ಹಂಬಲ ಓದನ್ನು ಮುಂದುವರಿಸಲು ಬಿಡಲಿಲ್ಲ. ಕೆಂಪು ನೆಲ ಎಂಬ ವಾರ ಪತ್ರಿಕೆಯೊಂದನ್ನು ಆರಂಭಿಸಿ, ರಾಷ್ಟ್ರಕಲ್ಯಾಣ ವಿದ್ಯಾರ್ಥಿ ಗಣದ ಅಧ್ಯಕ್ಷರಾಗಿ ಪೂಜ್ಯ ಮಾತಾಜಿಯವರಿಂದ ನೇಮಕಗೊಂಡು ವಿದ್ಯಾರ್ಥಿಗಳ ಸಂಘಟನೆಗೆ ತೊಡಗಿದರು. 1996ರಲ್ಲಿ ಕ್ರಿಯಾಮೂರ್ತಿ ದೀಕ್ಷೆ ತೆಗೆದುಕೊಂಡು ಶಿವಕುಮಾರ್ 2002ರಲ್ಲಿ ಸೆಪ್ಟೆಂಬರ್ 29ರಂದು ಜಂಗಮದೀಕ್ಷೆ ಪಡೆದು ಚನ್ನಬಸವಾನಂದ ಸ್ವಾಮಿಗಳೆಂಬ ನಾಮಾಂಕಿತ ಹೊಂದಿದರು. ಚಿನ್ಮಯಜ್ಞಾನಿ ಚನ್ನಬಸವಣ್ಣನವರು ನಂದನ ನಾಮ ಸಂವತ್ಸರದ ಕಾರ್ತಿಕ ಮಾಸದ ಪ್ರತಿಪದೆಯಂದು ಜನ್ಮ ತಾಳಿದರು. ಇದು ಕ್ರಿ.ಶ. 1172. ಶಿವಕುಮಾರ ಜನ್ಮತಾಳಿದ್ದು 1972; ಸರಿಯಾಗಿ 800 ವರ್ಷ. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಅನುಗ್ರಹ ಪಡೆದು ಧರ್ಮಪ್ರಚಾರ ಮಾಡಲೆಂದು ಸಂಕಲ್ಪಿಸಿ ಪೂಜ್ಯ ಮಾತಾಜಿ ಶಿವಕುಮಾರರನ್ನು ಜಂಗಮ ದೀಕ್ಷೆಯ ನಂತರ ಚನ್ನಬಸವಾನಂದ ಸ್ವಾಮಿಗಳೆಂದು ಕರೆದರು. ಉತ್ತಮ ವಾಗ್ಮಿತ್ವ, ಸಂಘಟನಾ ಚಾತುರ್ಯ ಹೊಂದಿರುವ ಪೂಜ್ಯ ಸ್ವಾಮೀಜಿ ಅಮೋಘ ಪ್ರವಚನಕಾರರು ಮತ್ತು ಹೋರಾಟಗಾರರು. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಡಲು ಆಗ್ರಹಿಸಿ ಬೀದರಿನಲ್ಲಿ ನಡೆದ ಹೋರಾಟದಲ್ಲಿ ಭಾಗವಹಿಸಿ ಬಳ್ಳಾರಿ ಜೈಲಿಗೂ ಹೋಗಿ ಬಂದರು. ಮಹಾಚೈತ್ರ ರದ್ದತಿಗಾಗಿ ನಡೆದ ಹೋರಾಟದಲ್ಲಿ ವಿದ್ಯಾರ್ಥಿ ಸಂಘಟನೆ ಮಾಡಿದರು. ನವ ದೆಹಲಿಯಲ್ಲಿ ನಡೆದ ಲಿಂಗಾಯತ ಧರ್ಮ ಸಮ್ಮೇಳನದ ಯಶಸ್ಸಿನಲ್ಲಿ ಸ್ವಾಮೀಜಿಯವರದು ಪ್ರಮುಖ ಪಾತ್ರ. 'ನವ ದೆಹಲಿಯ ಬಸವ ಮಂಟಪವನ್ನು ಕೊಳ್ಳುವುದರಲ್ಲಿ ಪೂಜ್ಯ ಮಾತಾಜಿಯವರ ಮಾರ್ಗದರ್ಶನದಲ್ಲಿ ಅಪ್ರತಿಮವಾಗಿ ಕಾರ್ಯ ಮಾಡಿದರು.

ಕ್ರಿಯಾ ಶೀಲ ಜಂಗಮ ಮೂರ್ತಿಯಾದ ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರ ಕರ್ತೃತ್ವ ಶಕ್ತಿ, ಬಸವ ನಿಷ್ಠೆ, ಬಹು ಭಾಷಾ ಪರಿಣತಿ, ವಾಗ್ಮಿತ್ವ - ಇವುಗಳನ್ನು ಗುರುತಿಸಿ ಪೂಜ್ಯ ಮಾತಾಜಿಯವರು ಬಸವ ಗಂಗೋತ್ರಿಯಲ್ಲಿ ದಿ. 27-5-2010ರಂದು ಸ್ಥಾಪಿಸಲಾಗುತ್ತಿರುವ ಚನ್ನಬಸವೇಶ್ವರ ಜ್ಞಾನ ಪೀಠಕ್ಕೆ ಜಗದ್ಗುರುವನ್ನಾಗಿ ಮಾಡಿ ಪೀಠಾರೋಹಣ ಮಾಡಿಸುತ್ತಿದ್ದಾರೆ.

ಪಂಚ ಪೀಠ - ಕಟ್ಟು ಕಥೆ ತುಂಬಿದ ಅಸಂಗತ ವಾದ

- ಸಿದ್ಧಲಿಂಗ ದೇಸಾಯಿ, ಧಾ.

ಸ್ಥಾವರಲಿಂಗ ಸ್ಥಾಪಿಸಿದ ಕಥೆಯನ್ನು ಹೆಣೆಯುತ್ತಾರೆ. ಪಂಚಾಚಾರ್ಯರನ್ನು ವೈಭವೀಕರಿಸಿ ಕಥೆ ಹೆಣೆಯುವುದೇ ಡಾ|| ಸವದತ್ತಿಮಠರಂಥವರ ಕಾಯಕವಾಗಿದೆ. "ಭಾರತಾದ್ಯಂತ ವೀರಶೈವ ಬೇರೆ ಬೇರೆ ರೂಪದಲ್ಲಿ ಅಸ್ತಿತ್ವದಲ್ಲಿತ್ತು." ಎಂದು ಬರೆಯುವ ಸವದತ್ತಿಮಠರು ಜಗತ್ತು ಸೃಷ್ಟಿಯಾಗುವ ಮೊದಲೇ ಈ ವೀರಶೈವ ಧರ್ಮ ಅಸ್ತಿತ್ವದಲ್ಲಿತ್ತೆಂದು ಕಟ್ಟುಕಥೆ ಹೇಳುತ್ತಾರೆ. ಹಾಗಾದರೆ ವೀರಶೈವ ಧರ್ಮವು ಇಷ್ಟೊತ್ತಿಗಾಗಲೇ ವಿಶ್ವವನ್ನೇ ವ್ಯಾಪಿಸಬೇಕಾಗಿತ್ತು. ಆದರೆ ಇವರು ಪ್ರತಿಪಾದಿಸುವ ವೀರಶೈವ ಧರ್ಮ ಕೇವಲ ಕರ್ನಾಟಕದಲ್ಲಿ ಹಾಗೂ ಕರ್ನಾಟಕ ಗಡಿ ಭಾಗದ ಇತರ ರಾಜ್ಯಗಳಲ್ಲಷ್ಟೇ ಏಕಿದೆ?

ವಾಸ್ತವವಾಗಿ ಬಸವಾದಿ ಶರಣರು ಬೋಧಿಸಿದ ಧರ್ಮವೆಂದರೆ "ಲಿಂಗಾಯತ ಧರ್ಮವೆ' ಆದರೆ ಆರಾಧ್ಯರ ಧಾರ್ಮಿಕ ಸಂಪ್ರದಾಯದ ಈ ಪಂಚಪೀಠಗಳವರು ಆಗ ಅಸ್ತಿತ್ವದಲ್ಲಿದ್ದ ವೀರವೈಷ್ಣವರ ವಿರುದ್ಧ ಈ ವೀರಶೈವ ಧರ್ಮವನ್ನು ಹುಟ್ಟು ಹಾಕಿ ವೀರಶೈವವನ್ನು ಪ್ರಚಲಿತಕ್ಕೆ ತಂದವರೇ ವಿನಃ ಅದು ಬಸವಾದಿ ಶರಣರು ಬೋಧಿಸಿದ ಲಿಂಗಾಯತವು ಧರ್ಮವಲ್ಲ. ಅದು ಹೇಗೆ? ಯಾವಾಗ ಈ ವೀರಶೈವ ಶಬ್ದ ಪ್ರಚಲಿತಕ್ಕೆ ಬಂದಿತೆಂಬ ಸ್ವಾರಸ್ಯಕರ ಸಂಗತಿ ಮೈಸೂರು ವಿಶ್ವವಿದ್ಯಾಲಯ 1935ರಲ್ಲಿ ಪ್ರಕಟಿಸಿದ ದಿ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್ಸ್ ಎಂಬ ಗ್ರಂಥದ ಮೊದಲ ಸಂಪುಟದ 153 ಹಾಗೂ 154ನೇ ಪುಟಗಳಲ್ಲಿ ಸ್ಪಷ್ಟವಾಗಿ ನಮೂದು ಆಗಿದೆ.

ಬಹುಕಾಲದಿಂದಲೂ ಪ್ರಚಲಿತವಿದ್ದ ತಮ್ಮ ಜಾತಿಗಳ ಹೆಸರಿನ ಬದಲಾಗಿ ಬೇರೊಂದು ಹೊಸ ಹೆಸರಿನಿಂದ ಸಂಭೋದಿಸಬೇಕೆನ್ನುವ ಬೇಡಿಕೆ ಹಲವಾರು ಸಮಾಜಗಳ ಇತ್ತೀಚಿನ ಪ್ರವೃತ್ತಿಯಾಗಿದೆ. ಇದಕ್ಕೆ ಬಹುಶಃ ಆ ಸಮಾಜದ ಸಾಂಪತ್ತಿಕ ಸ್ಥಿತಿಗತಿಯ ಸುಧಾರಣೆ ಹಾಗೂ ಶ್ರೇಷ್ಠತೆಯ ಕಲ್ಪನೆ ಮತ್ತು ಇನ್ನುಳಿದ ಹಲವಾರು ಸಂಗತಿಗಳು ಈ ರೀತಿಯ ಬೇಡಿಕೆಗೆ ಕಾರಣಗಳಾಗಿರಬಹುದು. ಉದಾ: ವೈಷ್ಣವ ದೇವಾಲಯಗಳಲ್ಲಿ ಸೇವೆ ಮಾಡುವ ಬ್ರಾಹ್ಮಣ ಸಾತನಿಗಳು ತಮ್ಮನ್ನು ವೆಂಕಟಪುರ ಬ್ರಾಹ್ಮಣರು ಅಥವಾ ಪ್ರಪನ್ನ ವೈಷ್ಣವ ಬ್ರಾಹ್ಮಣರು ಎಂದು ಕರೆಯಬೇಕೆಂದು ಅಪೇಕ್ಷಿಸುತ್ತಾರೆ. ಅದರಂತೆ 'ನಾಯಿಂದರು' (ಕ್ಷೌರಿಕರು) ತಮ್ಮನ್ನು 'ನಾಯಿಂದ ಬ್ರಾಹ್ಮಣರು' ಎಂದು ಸಂಭೋದಿಸಬೇಕೆಂದು ಅಪೇಕ್ಷಿಸುತ್ತಾರೆ. ಅದರಂತೆ ನಮ್ಮ ಸಮಾಜವನ್ನು ನೇಗಿಯವರು ಎಂದು ಕರೆಯದೆ 'ದೇವಾಂಗ ಬ್ರಾಹ್ಮಣ' ರೆಂದು ದಾಖಲಿಸಬೇಕೆಂದು ದೇವಾಂಗ ಧರ್ಮ ಪ್ರಕಾಶಿಕಾ ಸಂಸ್ಥೆ ಬೇಡಿಕೆಯನ್ನಿಟ್ಟಿದೆ. ಪಾಂಚಾಳರು ತಮ್ಮನ್ನು ವಿಶ್ವಕರ್ಮ ಬ್ರಾಹ್ಮಣರೆಂದು ಕರೆಯಬೇಕೆಂದು ಬಹಳ ಗಟ್ಟಿಯಾಗಿ ಹೋರಾಡುತ್ತಿದ್ದಾರೆ. ನಾಗ ಮಂಗಲ ತಾಲ್ಲೋಕಿನಲ್ಲಿರುವ ಬಹುಕಾಲದಿಂದ ತಿರುಕಲದವರು ಎಂದು ಕರೆಯಲ್ಪಡುತ್ತಿದ್ದ ಸಮಾಜದವರು ತಮ್ಮನ್ನು 'ಕಣಿಕನ್ನಾ' ಎಂದು ಕರೆಯಬೇಕೆಂದು ಬಯಸುತ್ತಾರೆ. ಕೃಷ್ಣರಾಜಪೇಟೆಯ ಹಾಗೂ ಇನ್ನಿತರೆಡೆಯ ಲಿಂಗಾಯತರು ತಮ್ಮನ್ನೂ ವೀರಶೈವರೆಂದು ಕರೆಯಬೇಕೆಂದು ಬಯಸುತ್ತಾರೆ. ಕುರುಬ ಸಮಾಜದ ಒಬ್ಬರ ಕುರುಬರನ್ನು ಇನ್ನು ಮೇಲಿಂದ 'ಆರ್ಯಕ್ಷತ್ರಿಯ' ರೆಂದು ಕರೆಯಬೇಕೆಂದು ಸೂಚಿಸುತ್ತಾರೆ.

ಹೀಗೆ ಲಿಂಗಾಯತರು ತಮ್ಮ ಕೀಳರಿಮೆಯಿಂದ ಹೊರಬರಲು ಹೇರಿಕೊಂಡದ್ದೇ ವೀರಶೈವ. ವೀರಶೈವ ಮತ್ತು ಲಿಂಗಾಯತ ಶಬ್ದಗಳ ಬಗ್ಗೆ ಚರ್ಚೆ ನಡೆದು, ವೀರಶೈವ ಶಬ್ದ 12ನೇ ಶತಮಾನದ ತರುವಾಯ ಬಳಕೆಯಲ್ಲಿ ಬಂದಿದೆ ಎಂಬ ವಾಸ್ತವವನ್ನು ನಾನೂ ಸೇರಿದಂತೆ ಡಾ|| ಎಂ.ಎಂ.ಕಲಬುರ್ಗಿಯಾದಿಯಾಗಿ ಅನೇಕರು ಪ್ರತಿಪಾದಿಸಿ ಸತ್ಯವನ್ನು ಸ್ಥಾಪಿಸಲಾಗಿದೆ.

ಬರಿ ಜಾತಿ ಜಂಗಮರೇ ಪಂಚಾಚಾರ್ಯರ ಹಾಗೂ ವೀರಶೈವ ಪರ ವಕಾಲತ್ತು ವಹಿಸುತ್ತಲಿರುವುದು, ಇದನ್ನು ವಿರೋಧಿಸುತ್ತಿರುವವರಲ್ಲಿ ಸುಜ್ಞಾನಿ ಜಂಗಮರನ್ನೊಳಗೊಂಡು ಇತರ ಲಿಂಗಾಯತರಿರುವುದು ಏನನ್ನು ಸೂಚಿಸುತ್ತದೆ?

****

ವೀರಶೈವವೂ ಒಂದು ಪ್ರಾಚೀನ ಧರ್ಮವಾದ್ದರಿಂದ ಅದರ ಬೇರುಗಳು ಸಂಸ್ಕೃತ ಕೃತಿಗಳಲ್ಲಿರುವುದು ಸ್ಪಷ್ಟವಾಗಿದೆ. ಎಂದು ಡಾ. ಸವದತ್ತಿಮಠರು ಬರೆಯುತ್ತಾರೆ. ವಚನಗಳೇ ಲಿಂಗಾಯತ ಧರ್ಮದ ಶಾಸ್ತ್ರ ಸಾಹಿತ್ಯವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವೆಂದು ಹಿಸ್ಟರಿ ಆಂಡ್ ಫಿಲಾಸಫಿ ಆಫ್ ಲಿಂಗಾಯತ ರಿಲಿಜನ್ ಎಂಬ ಗ್ರಂಥದಲ್ಲಿ ಪ್ರೊ.ಎಂ.ಆರ್. ಸಾಖರೆಯವರು ತಿಳಿಸಿದ್ದಾರೆ. ಡಾ|| ಸವದತ್ತಿಮಠರು ತಿಳಿಸಿರುವಂತೆ ಶ್ರೀಕರ ಭಾಷ್ಯ ಹಾಗೂ ಸಿದ್ಧಾಂತ ಶಿಖಾಮಣಿ ಗ್ರಂಥಗಳು ಸನಾತನವೂ ಅಲ್ಲ, ಪುರಾತನವೂ ಅಲ್ಲ, ಹದಿಮೂರು ಹದಿನಾಲ್ಕನೇ ಶತಮಾನದವುಗಳೆಂದು ಡಾ|| ಎಂ.ಚಿದಾನಂದಮೂರ್ತಿಯವರು ತಮ್ಮ ಒಂದು ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ.

12ನೇ ಶತಮಾನದ ಶಿವಶರಣರು ತಮ್ಮ ವಚನಗಳಲ್ಲಿ ವೇದಾಗಮಗಳಲ್ಲಿರುವ ವೀರಶೈವ ತತ್ವಗಳನ್ನೇ ಹೇಳುತ್ತಿರುವುದಾಗಿ ಎಂದು ಡಾ| ಸವದತ್ತಿಮಠರು ಹೇಳುತ್ತಾರೆ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಭಾರವನ್ನೆತ್ತುವೆ
ಆಗಮದ ಮೂಗ ಕೊಯ್ಯುವೆ ನೋಡಯ್ಯಾ
ಮಹಾದಾನಿ ಕೂಡಲ ಸಂಗಮದೇವಾ
ಮಾದಾರ ಚನ್ನಯನ ಮನೆಯ ಮಗ ನಾನಯ್ಯ

ಹೀಗೆ ವೇದ, ಆಗಮ, ಉಪನಿಷತ್ತು, ತತ್ವಶಾಸ್ತ್ರಗಳನ್ನು ಟೀಕಿಸಿದ ಹಾಗೂ ಅಪಹಾಸ್ಯ ಮಾಡಿದ ಅನೇಕ ವಚನಗಳು ಶರಣರ ವಚನಗಳಲ್ಲಿ ಬರುತ್ತವೆ. ಇವೂ ವೇದಗಳಲ್ಲಿ ಬಂದಿದ್ದರೆ ಸಂತೋಷ!

ಅಂತೂ 'ಸಂಗತ' ಅಂಕಣದಲ್ಲಿ ತಮ್ಮ ಅಸಂಗತ ವಿಚಾರವನ್ನು ಹರಿಬಿಟ್ಟು ಡಾ|| ಸವದತ್ತಿಮಠರ ತಮ್ಮ ನಿಜ ಬಣ್ಣವನ್ನು ಹೊರಗೆಡವಿದ್ದಾರೆ.

ಬಸವ ಮಂಟಪಗಳ ಉದ್ಘಾಟನೆ ಮತ್ತು ಅಮೃತ ಶಿಲಾ ಪುತ್ಥಳಿಯ ಸ್ಥಾಪನೆ

ಬಳ್ಳಾರಿಯ ಬಸವೇಶ್ವರ ನಗರದಲ್ಲಿ ಸುಂದರವೂ, ಭವ್ಯವೂ ಆದ ಬಸವ ಮಂಟಪವು ನಿರ್ಮಾಣವಾಗಿದ್ದು ಇದರ ಗುರು ಪ್ರವೇಶ ಮತ್ತು ಶ್ರೀಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ಸ್ಥಾಪನೆಯು ದಿ.25-4-2010ರಂದು ನೆರವೇರಿತು.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಶಿರೋಳ ತಾಲ್ಲೋಕಿನ ಶೆಡಶ್ಯಾಳ ಗ್ರಾಮದಲ್ಲಿ ಸಹ ಬಸವ ಮಂಟಪವು ನಿರ್ಮಾಣವಾಗಿದ್ದು ಇದರ ಗುರು ಪ್ರವೇಶ ಮತ್ತು ಶ್ರೀಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯ ಸ್ಥಾಪನೆಯು ದಿ. 2-5-2010ರಂದು ನೆರವೇರಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಅಮೃತಶಿಲಾ ಪುತ್ಥಳಿಯನ್ನು ದೈವೀಕರಿಸಿದರು.

ಹಾವೇರಿ ನಗರದಲ್ಲಿ ದಿ. 26-3-2010ರಂದು ಪ್ರಾರಂಭವಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನವು 40 ದಿವಸಗಳ ಕಾಲ ಅಖಂಡವಾಗಿ ನಡೆದು ದಿ.4-5-10ರಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಮಂಗಲಗೊಂಡಿತು.



ದಿ.11-4-2010 ಧಾರವಾಡದ ಕಲಾಭವನದಲ್ಲಿ ನಡೆದ ಧರ್ಮಚಿಂತನ ಗೋಷ್ಠಿಯ ಉದ್ಘಾಟನೆಯನ್ನು ಸಂಸತ್ ಸದಸ್ಯರಾದ ಪ್ರಹ್ಲಾದ ಜೋಷಿ ನೆರವೇರಿಸಿದರು



ಶಾಲು ಹೊದ್ದಿಸಿ ನೆನಪಿನ ಕಾಣಿಕೆ ನೀಡಿ ಪ್ರಹ್ಲಾದ ಜೋಷಿಯವರನ್ನು ಪೂಜ್ಯ ಮಾತಾಜಿ ಸತ್ಕರಿಸಿದರು

CPMG/KA/BGW-50WPP R. 17 2009-2011, L.N.R.No
No. Pages-16+4 Photos, Reg. No. 19988/70



ಬಳ್ಳಾರಿ ಬಸವ ಮಂಟಪದ ಹೊರ ನೋಟ



ಪ್ರಾರ್ಥನಾ ಮಂದಿರದ ಒಳಾಂಗಣ